MYSORE LEGISLATIVE ASSEMBLY

TENTH DAY.

Sunday, 9th August 1959.

The House met in the Assembly Hall, Vidhana Soudha, Bangalore, at Fifteen Minutes past Eleven of the Clock.

MR. SPEAKER (SRI S. R. KANTHI, B.A., LL.B.) in the Chair.

MYSORE LAND REFORMS BILL, 1958.

Motion to consider—(Contd).

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಸ್ವಾಮಿ, ಈ ದಿವಸ ಈ ಭೂ ಸುಧಾರಣೆ ಮಸೂದೆಯನ್ನು ನಾನು ಅಂಗೀಕರಿಸುತ್ತಾ ಇದರಲ್ಲಿ ಅಡಕವಾಗಿರುವ ಕೆಲ ದೋಷಪದೋಷಗಳನ್ನು ಸರಿಪಡಿಸಬೇಕೆಂಬುದಾಗಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈ ದಿವಸ ನಾವು ಒಳ್ಳೆಯ ವಾತಾವರಣದಲ್ಲಿ ಸೇರಿದ್ದೇವೆ. ಕಾರಣ, ನಮ್ಮ ವಿಧಾನ ಸಭೆಯ ಅಧ್ಯಕ್ಷರು ಪಾಶ್ಚಿಮಾತ್ಯ ದೇಶಕ್ಕೆ ಹೋಗುವಾಗ ನಾವು ಬೀಳ್ಕೊಟ್ಟೆವು. ಅದರ ಫಲವಾಗಿ ಇವೊತ್ತು ನಾವು ಅವರ ಪಾಶ್ಚಿಮಾತ್ಯ ದೇಶಗಳ ಅನುಭವಗಳನ್ನು ಪಡೆದುಕೊಂಡೆವು. ಇನ್ನು ಭೂ ಸುಧಾರಣೆಯ ವಿಷಯವಾಗಿ ಮಾತನಾಡಬೇಕಾಗಿರುವುದರಿಂದ, ಆ ವಿಷಯದಲ್ಲಿ ಹೇಳುತ್ತಾ ಮೊದಲನೆಯದಾಗಿ ಇದರಲ್ಲಿ ಸೀಲಿಂಗ್ ಹಾಕಬಾರದು ಎಂಬುದಾಗಿ ಕೋರಿಕೊಳ್ಳುತ್ತಾ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ಜಗತ್ತಿನಲ್ಲಿ ಮನುಷ್ಯ ತಾನು ಬಾಳಬೇಕೆಂಬುದಾಗಿ ಆಶೆಯಾವಾಗ ಪಟ್ಟನೋ ಅಲ್ಲಿಂದ ಇಲ್ಲಿಯವರೆಗೆ ಮಾಡಿನುವವರು ಮತ್ತು ಮಾಡತಕ್ಕವರು ಇಬ್ಬರೂ ಇದ್ದೇ ಇರುತ್ತಾರೆ. ಜಗತ್ತಿನಲ್ಲಿ ಎರಡು ಬಗೆಯ ನಾಗರಿಕ ಜೀವನ ನಡೆಯುತ್ತಿದೆ. ಸರ್ಕಾರವೇ ನೇರವಾಗಿ ಜನಗಳಿಂದ ಕೆಲಸ ತೆಗೆದುಕೊಂಡು ಉತ್ಪನ್ನ ಮಾಡತಕ್ಕ ಒಂದು ವರ್ಗ. ಇನ್ನೊಂದು ಪ್ರಜಾಪ್ರಭುತ್ವ ರೀತ್ಯಾ ಮನುಷ್ಯನಿಗೆ ಕೊಡತಕ್ಕ ಹಕ್ಕುಬಾಧ್ಯತೆಗಳನ್ನು ಕೊಟ್ಟು ಅವರ ಬುದ್ಧಿಶಕ್ತಿಗಳಿಗೆ ಒಂದು ನ್ಯಾಯರೂಪದಲ್ಲಿ ಅವಕಾಶ ಮಾಡಿಕೊಟ್ಟು ಉತ್ಪನ್ನ ಹೆಚ್ಚು ಮಾಡತಕ್ಕದ್ದು. ನಾವು ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡಿರತಕ್ಕ ರಾಷ್ಟ್ರವಾಗಿರುವುದರಿಂದ, ಖಾಸಗೀ ಉದ್ಯಮಕ್ಕೆ ಅವಕಾಶ ಖಾಸಗೀ ಕೃಷಿಗೆ ಅವರ ಜೀವನ ಎಷ್ಟರಮಟ್ಟಿಗೆ ಇದೆಯೋ ಅಷ್ಟರಮಟ್ಟಿಗೆ ಕುಂಠಿತವಾಗದು. ಹಾಗೆ ಕುಂಠಿತಸಿದ್ದೇ ಆದರೆ, ನಾಳೆ ಗಂಡಾಂತರವೇ ಸಂಭವಿಸೀತು ಎಂದು ನನ್ನ ಸ್ವಂತ ಅಭಿಪ್ರಾಯ. ಅಷ್ಟೇ ಅಲ್ಲ, ಪಂಡಿತ ನೆಹರೂರವರು ಖಾಸಗಿ ಉದ್ಯಮಗಳಿಗೆ ಅವಕಾಶ ಕೊಡಬೇಕು, ಹಾಳುಮಾಡಬಾರದು ಎಂದು ಹೇಳಿದ್ದಾರೆ. ಅವರಲ್ಲಿ ಬುದ್ಧಿಶಕ್ತಿ ಇರುವವರಿಗೆ ಅಂಥವರಿಂದ ರಾಷ್ಟ್ರದ ಸಂಪತ್ತನ್ನು ಅಭಿವೃದ್ಧಿ ಮಾಡಲು ಅವಕಾಶ ಕೊಡಬೇಕು. ಅವರೂ ಉತ್ಪತ್ತಿಯನ್ನು ಮಾಡುತ್ತಿದ್ದಾರೆ. ಹಿಡುವಳಿದಾರರ ಪ್ರಶ್ನೆಯನ್ನು ನಾವು ಏತಕ್ಕೆ ತೆಗೆದುಕೊಳ್ಳಬೇಕು, ಎಂದರೆ ನಿಜವಾಗಿಯೂ ಕೂಡ ಜಮೀನಿನ ಮೇಲೆ ಕೆಲಸ ಮಾಡುವವನು ಯಾರು ಇಲ್ಲವೋ ಅವನಿಂದ ಭೂಮಿ ಬಿಡುಗಡೆ ಆಗಬೇಕು. ಉದ್ಧಮ ಮಾಡುವವನಿಗೆ, ಕೃಷಿ ಮಾಡುವವನಿಗೆ ಪ್ರೋತ್ಸಾಹ ಕೊಡಬೇಕು. ಅದು ಅವರ ಉದ್ದೇಶ. ನಿಜವಾಗಿ ಸಾಗು ಮಾಡುವವನ ಕಷ್ಟನಷ್ಟಗಳನ್ನು ಪರಿಹರಿಸಬೇಕು. ಅವನಿಂದ ವ್ಯವಸಾಯ ಉತ್ಪತ್ತಿಯನ್ನು ಹೆಚ್ಚಿಸಬೇಕು. ಅದು ಮುಖ್ಯವಾದ ಉದ್ದೇಶ. ನಿಜವಾದ ವ್ಯವಸಾಯಗಾರನ ಮೇಲೆ ಜಪ್ತಿ ಸೀಲಿಂಗ್ ಹಾಕತಕ್ಕದ್ದು ಬೇಡ. ಈ ಕೆಲವು ಮೂಲ ತತ್ವಗಳನ್ನು ಕುಂಠಿತಕ್ಕೆ ಯಾವ ಮಸೂದೆಯೂ ಅಪಾಯಕರ, ಒಳ್ಳೆಯದಲ್ಲ ಎಂಬುದಾಗಿ ಹೇಳುತ್ತೇನೆ. ಸೀಲಿಂಗ್ ನಿಗದಿ ಮಾಡಿದ ಕೂಡಲೇ ಸಮಸ್ಯೆ ಬಗೆಹರಿಯುವುದಿಲ್ಲ. ಸೀಲಿಂಗ್ ಹಾಕದಿದ್ದರೆ ಯಾವ ದುಷ್ಪರಿಣಾಮವೂ ಆಗುವುದಿಲ್ಲ. ಇವೊತ್ತು ನಾವು ಗಾಂಧಿ ತತ್ವ ಹೇಳತಕ್ಕವರು, ಗಾಂಧಿ ಆದರ್ಶ ಜೀವನ ನಡೆಸತಕ್ಕವರು. ಇಂದು ಜೀವನ ಏನಾಗುತ್ತಿದೆ? ಪಟ್ಟಣಗಳಿಗೆ ಹೆಚ್ಚು ಹೆಚ್ಚಾಗಿ ಜನರು ವಲಸೆ ಬರುತ್ತಿದ್ದಾರೆ. ಹಳ್ಳಿಗಾಡಿನಲ್ಲಿ ಜನರ ಬುದ್ಧಿಶಕ್ತಿ ಅಭಿವೃದ್ಧಿಯಾಗುತ್ತಾ ಇಲ್ಲ. ಭಾರಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕಾದರೆ ಪಟ್ಟಣಗಳಲ್ಲಿ ಪ್ರಾರಂಭ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿರತಕ್ಕ ಗ್ರಾಮೋದ್ಯೋಗಗಳು ನಶಿಸುತ್ತಿವೆ. ಆದ್ದರಿಂದ ಇಷ್ಟು ಕಷ್ಟ ಬರಲು ಕಾರಣವಾಯಿತು. ಭೂಮಿಯ ಮೇಲೆ ಒತ್ತಡ ಇದೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈಗ ಭೂಮಿಯಲ್ಲಿ ಎಷ್ಟು ಒತ್ತಡ ಇದೆಯೋ ಅದಕ್ಕಿಂತ ಇನ್ನೂ ಹೆಚ್ಚಿಗೆ ಒತ್ತಡ 20-30 ವರ್ಷಗಳಾದ ಮೇಲೆ ಆಗುತ್ತದೆ. ಈ ಸಮಸ್ಯೆ ಇವೊತ್ತೇ ಬಗೆಹರಿಯುವುದಿಲ್ಲ. ಭಾರಿಯಾದ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದರಿಂದ ಗಂಡಾಂತರ ಬರುತ್ತದೆ ಎಂದು ನನ್ನ ಅಭಿಪ್ರಾಯ. ಭಾರಿ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದರಿಂದ ಹಾಳಾಗುತ್ತಿದೆ. ಭಾರಿ ಕೈಗಾರಿಕೆಗಳನ್ನು ಮಾಡುವುದು ಬೇಡ. ಭದ್ರಾವತಿ, ಎಚ್.ಎಂ.ಟಿ. ವಿಂತಾದ ಫ್ಯಾಕ್ಟರಿಗಳು ಬೇಕಾಗಿಲ್ಲ. ಗ್ರಾಮಗಳಲ್ಲಿ ನಿರುದ್ಯೋಗಿಗಳು ಜಾಸ್ತಿ ಇದ್ದಾರೆ. ಅವರಿಗೆ ಕೆಲಸ ಕೊಡದಿದ್ದರೆ ನಿರುದ್ಯೋಗ ಹೆಚ್ಚುತ್ತದೆ. ನಾವು ಬಡತನ ಹಂಚುವ ಕಾರ್ಯಕ್ಕೆ ಇಳಿದಿದ್ದೇವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನನ್ನ ಉದ್ದೇಶ ಇಷ್ಟೆ: ಯಾರು ದುಡಿಯುತ್ತಾರೋ ಅವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಅದನ್ನು ಬಿಟ್ಟರೆ ಸರ್ಕಾರವೇ ನೇರವಾಗಿ ಜನಗಳಿಂದ ಬ್ಯೆಮ್ ಪ್ರಕಾರ ಕೆಲಸ ತೆಗೆದುಕೊಂಡರೆ ದೇಶದ ಉತ್ಪತ್ತಿಯನ್ನು ಹೆಚ್ಚು

(ಶ್ರೀ ಡಿ. ಟಿ. ಸೀತಾರಾಮರಾವ್)

ಮಾಡುವ ಗುರಿಯನ್ನು ಶೀಘ್ರವಾಗಿ ಮುಟ್ಟುತ್ತೇವೆ. ಹಾಗಾದರೆ ನಾವೂ ಕೂಡ ಬದುಕಬಹುದು. ನನ್ನ ಅಭಿಪ್ರಾಯ ಅಷ್ಟೆ. ಖಾಸಗೀ ಉದ್ಯಮಗಳಿಗೆ ಪಬ್ಲಿಕ್ ಸೆಕ್ಟರ್‌ನಲ್ಲಿ ಎಷ್ಟು ಪ್ರೋತ್ಸಾಹ ಕೊಡುತ್ತೀರೋ ಅದೇ ರೀತಿ ಪ್ರೈವೇಟ್ ಸೆಕ್ಟರಿನಲ್ಲಿಯೂ ಪ್ರೋತ್ಸಾಹ ಕೊಡಬೇಕು. ವ್ಯವಸಾಯ ಮಾಡ ತಕ್ಕವನಿಗೆ ಸೀಲಿಂಗ್ ನಿಗದಿ ಮಾಡಬೇಡಿ. ಈಗಲೂ ಕೂಡ ಸುಧಾರಣೆ ಕ್ರಾಂತಿಕಾರಕವಾಗಿಲ್ಲ. ಏತಕ್ಕೆಂದರೆ ಹತ್ತು ಮೈಲಿ ರೇಡಿಯಸ್ ಇರಬೇಕೆಂದು ಈ ಮಸೂದೆಯಲ್ಲಿದೆ. ಸ್ವಂತ ಸಾಗುವಳಿದಾರನಿಗೆ ಹತ್ತು ಮೈಲಿಯಲ್ಲಿ ಒಂದು ಜಮೀನು ಇರುತ್ತದೆ, ಹತ್ತು ಮೈಲಿ ದೂರದಲ್ಲಿ ಇನ್ನೊಂದು ಜಮೀನು ಇರುತ್ತದೆ, ಅಂತರ ಇಪ್ಪತ್ತು ಮೈಲಿ ಆಗುವುದು. ಅದನ್ನು ಸಾಗು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಥಾ ಪ್ರಕಾರ ಭೂಮಿಯ ಮೇಲೆ ಹತೋಟಿ ಇಟ್ಟುಕೊಂಡು ಗೇಣೀದಾರನಿಗೆ ಆ ಭೂಮಿಯನ್ನು ಕೊಟ್ಟು ಸಾಗುವಳಿ ಮಾಡಿಸಬೇಕಾಗುತ್ತದೆ. ಯಾವುದೇ ರೀತಿ ನುಣಿಚಿಕೊಳ್ಳುವುದಕ್ಕೆ ಹಿಡುವಳಿದಾರನಿಗೆ ಅವಕಾಶವಿದೆ ಎಂಬ ಅರ್ಥ ಕಂಡುಬರುತ್ತದೆ. ಸ್ವತಃ ವ್ಯವಸಾಯ ಮಾಡತಕ್ಕವನು ಅದೇ ಗ್ರಾಮದಲ್ಲಿ ವಾಸವಾಗಿರಬೇಕು. ಇಲ್ಲದಿದ್ದರೆ ಅಕ್ಕಪಕ್ಕದ ಗ್ರಾಮದಲ್ಲಿ ಇರಬೇಕು. ಹತ್ತು ಮೈಲಿ ರೇಡಿಯಸ್ ಮಾಡಿರುವುದರಿಂದ ಇದರಿಂದ ಏನೂ ಪರಿಣಾಮವಾಗುವುದಿಲ್ಲ. ಭೂ ಮಾಲೀಕ ಹತೋಟಿಯನ್ನು ಗೇಣೀದಾರನ ಮೇಲೆ ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅದರಿಂದ ಪ್ರಯೋಜನವಾಗುವುದಿಲ್ಲ. ಒಳಿಯ ರೀತಿ ಸಾಗುವಳಿಯಾಗಬೇಕು.

ಪ್ಲಾಂಟೇಷನ್‌ಗಳಲ್ಲಿ ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದಾರೆ. ನಾನು ಇನ್ನೂ ಕೆಲವನ್ನು ಅದರೊಳಗೆ ಸೇರಿಸಬೇಕೆಂದು ಹೇಳುತ್ತೇನೆ. ಹಿಡುವಳಿಯ ಮಿತಿಯಿಂದ ವಿನಾಯಿತಿ ತೋರಲ್ಪಡುವ ತೋಟಗಳ ಜೊತೆಗೆ ಗೇರು ಬೀಜ ಮತ್ತು ನೀಲಗಿರಿ ಎಣ್ಣೆ ಮರಗಳು—ಇತ್ಯಾದಿ ತೋಟಗಳನ್ನು ಸೇರಿಸಬೇಕು. ಟೀ, ಕಾಫಿ, ರಬ್ಬರ್, ಅಡಿಕೆ, ತೆಂಗು—ಇತ್ಯಾದಿ ತೋಟಗಳನ್ನು ವಿನಾಯಿತಿಯೊಳಗೆ ಸೇರಿಸಿದ್ದೀರಿ. ಅದರ ಜೊತೆಗೆ ಇವನ್ನೂ ಸಹ ಸೇರಿಸಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಅನಂತರ ಇನ್ನು ಲ್ಯಾಂಡ್ ಕಮಿಷನಿನಲ್ಲಿ ಖಾಸಗಿಯವರನ್ನು ಸೇರಿಸಿದ್ದೀರಿ. ಆ ಬಗ್ಗೆ ಶ್ರೀ ಕುಂದೂರು ರುದ್ರಪ್ಪನವರು ಇಬ್ಬರು ಖಾಸಗಿಯವರು ಅದರಲ್ಲಿ ಇರುವುದು ಸಾಲದು. ಇನ್ನೊಬ್ಬರನ್ನು ಆ ಭೂ ಆಯೋಗದಲ್ಲಿ ಸೇರಿಸಬೇಕೆಂದು ಹೇಳಿದ್ದಾರೆ. ಅದೇ ಅಭಿಪ್ರಾಯವನ್ನು ನಾನೂ ಹೇಳುತ್ತೇನೆ. ಮೂರು ಜನ ಖಾಸಗಿಯವರು ಇರಬೇಕು. ಮೆಜಾರಿಟಿ ಖಾಸಗಿಯವರದೇ ಇರಬೇಕು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

ಇನ್ನು ಜಮೀನುಗಳ ವರಮಾನ ಕಂಡುಹಿಡಿಯುವ ಬಗ್ಗೆ ಖುಷ್ಕಿ ಪೈರಿಗೆ ಮೂರನೆಯ ಒಂದು ಭಾಗ ಎಂಬುದಾಗಿ ಇಲ್ಲಿ ಸೂಚಿಸಲಾಗಿದೆ. ಮೂರನೆಯ ಒಂದು ಭಾಗ ಎಂಬುದನ್ನು ಯಾವ ಆಧಾರದ ಮೇಲೆ ನಿಗದಿ ಮಾಡಿದರೋ ನಮಗೆ ಗೊತ್ತಾಗುವುದಿಲ್ಲ. ಕಾರಣ ಬ್ಲಾಕ್ ಸಾಯಲ್‌ನಿಂದ ಅನೇಕ ಕಡೆ ಉತ್ಪತ್ತಿ ಹೆಚ್ಚು ಬರುತ್ತದೆ. ತರೀ ಜಮೀನನ್ನು ತೆಗೆದುಕೊಂಡರೆ ಅರ್ಧ ಭಾಗ ಎಂದು ನಿಗದಿ ಮಾಡಿದ್ದೀರಿ. ಮಲೆನಾಡು ಲೆಕ್ಕದಲ್ಲಿ ಇಷ್ಟು ಉತ್ಪತ್ತಿ ಒಬ್ಬ ಮನುಷ್ಯನಿಗೆ ಬರಬೇಕು ಎಂದಿದೆ. ಹತ್ತು ಪಲ್ಲ ಉತ್ಪತ್ತಿಗೆ ಎಷ್ಟು ಖರ್ಚು ಮಾಡುತ್ತಾರೋ ಅದಕ್ಕೆ ಸರಿಹೋಗುತ್ತದೆ. ಅದನ್ನು ಶೇಕಡ 50 ಭಾಗ ವರಮಾನ ಎಂದು ಲೆಕ್ಕ ಹಾಕಕೊಂಡಿದ್ದೀರಿ, ಆ ಲೆಕ್ಕ ಸರಿಹೋಗುವುದಿಲ್ಲ. ಅದನ್ನು ಸರಿಪಡಿಸಬೇಕು. ಅಷ್ಟೇ ದರವನ್ನು ಖುಷ್ಕಿ ಪೈರಿಗೂ ಲೆಕ್ಕ ಹಾಕಬೇಕೆಂದು ಹೇಳುತ್ತಿದ್ದೇನೆ. ಖಾಯಂ ಗೇಣೀದಾರ ಭೂಮಿ ಪಡೆಯುವಾಗ ಸಣ್ಣ ಹಿಡುವಳಿದಾರ ಅವನ ಭೂಮಿ ಎಷ್ಟಿದೆಯೆಂಬುದನ್ನು ಮೊದಲು ನೋಡಬೇಕು. ಉದಾಹರಣೆಗೆ ಆರೂವರೆ ಎಕರೆಯಷ್ಟು ಅವನಿಗೆ ಭೂಮಿ ಇದ್ದರೆ ಐದು ಎಕರೆ ಬೇಸಿಕ್ ಹೋಲ್ಡಿಂಗ್ ನಷ್ಟು ಬರುತ್ತದೆ. ಇನ್ನು ಮಿಕ್ಕ ಒಂದೂವರೆ ಎಕರೆ ಖಾಯಂ ಗೇಣೀದಾರನಿಗೆ ಕೊಡಬೇಕಾಗುತ್ತದೆ. ಅದು ಅವನ ಜೀವನಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಗೇಣೀದಾರನಿಗೆ ಪೂರ್ತಿಯಾಗಿ ಕೊಡಿಸಬೇಕು. ಇಲ್ಲದಿದ್ದರೆ ಅದು ಭೂ ಮಾಲೀಕನಿಗೆ ಅಥವಾ ಸಣ್ಣ ಭೂಮಿ ಹೊಂದಿರುವ ಹಿಡುವಳಿದಾರನಿಗೆ ಸಿಕ್ಕಬೇಕು. ಜಮೀನನ್ನು ತುಂಡು ತುಂಡು ಮಾಡುವುದು ಸರಿಯಲ್ಲ. ಪೇಜ್ 28 ಸೆಕ್ಷನ್ 20 (ಕ್ಲಾಜು 2)ರಲ್ಲಿ ಆ ವಿಷಯ ಹೇಳಿದೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮೂಕಪ್ಪನವರು ಗೇಣೀದಾರನಿಗೆ ಗೇಣಿ ಕೊಡಿಸುವುದರಲ್ಲಿ ಒಂದು ಸಕಾರಣ ಕೊಟ್ಟಿದ್ದಾರೆ. ಅದೇನೆಂದರೆ ಸರ್ಕಾರದವರು ಬಡ ರೈತರ ಪರವಾಗಿರಬೇಕು. ಭೂ ಮಾಲೀಕರ ಪರವಾಗಿ ಇರಕೂಡದು. ಮೂರು ವರ್ಷಗಳು ಗೇಣೀ ಕೊಡದಿದ್ದರೆ ಅವನನ್ನು ಜಮೀನಿನಿಂದ ಬಿಡಿಸುವುದು ನಿಜ. ಆದರೆ ರೈತ ಮಾಲೀಕನಿಗೆ ನೋಟೀಸ್ ಕೊಡುವುದಾಗಲಿ, ಏತಕ್ಕೆ ಗೇಣಿ ತೆಗೆದುಕೊಂಡು ಹೋಗಲಲ್ಲವೆಂದು ಹೇಳುವುದಾಗಲಿ ಸರಿಯಲ್ಲ. ಮಾಲೀಕನು ಗೇಣಿ ಕೊಟ್ಟಿಲ್ಲವೆಂದು ಅವನ ಪಾರ್ಟಿಗೆ ನೋಟೀಸ್ ಕೊಡುವುದಕ್ಕೆ ಮೂರು ವರ್ಷ ಎಂದು ಹಾಕಿದರೆ ಸರಿಹೋಗುತ್ತದೆಯೆ? ಗೇಣೀದಾರನಿಗೆ ಮಾಲೀಕನಿಂದ ಯಾವ ರೀತಿಯಲ್ಲೂ ತೊಂದರೆಯಾಗಕೂಡದು. ಗೇಣಿ ಸಂದಾಯವಾಗುವಂತೆ ಭೂ ಒಡೆಯ ಒಂದು ವರ್ಷದೊಳಗೆ ನೋಟೀಸ್ ಕೊಡಬೇಕು. ಆ ರೀತಿ ವ್ಯವಸ್ಥೆ ಮಾಡಬೇಕು. ಇದರಿಂದ ಉಭಯ ಪಾರ್ಟಿಗಳಿಗೂ ಅನುಕೂಲವಾಗುತ್ತದೆ, ರೈತನಿಗೆ ಕರುಕುಳ ತಪ್ಪುತ್ತದೆ.

ಇನ್ನು ಸೆಕ್ಷನ್ 51—ಪರಿಹಾರದ ವಿಷಯ. ಇದರಲ್ಲಿ ಭೂಮಿಯ ಸಲುವಾಗಿ ಕೊಡಲಾದ ಗೇಣಿಯ ಮೊಬಲಗು ನಿವ್ವಳ ಆದಾಯದಲ್ಲಿ 15 ಪಟ್ಟುಗಳಷ್ಟು ಎಂದು ಇದೆ. 15ರಷ್ಟು ಎಂಬುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಕೆಲವು ಕಡೆ ಅರ್ಬನ್ ಏರಿಯಾದಲ್ಲಿ ಒಂದು ಎಕರೆಗೆ ಮೂರು ಸಾವಿರ, ನಾಲ್ಕು ಸಾವಿರ, ಐದು ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕಾಗುತ್ತದೆ, ಕೊಡಲೇ ಬೇಕು. ಮಲೆನಾಡಿನಲ್ಲಿ ಎಕರೆಗೆ 500-600 ರೂಪಾಯಿಗಳು ಬೆಲೆ ಇರುತ್ತದೆ. ವಾರ್ಷಿಕ ಉತ್ಪನ್ನದ ನಿವ್ವಳ ವರಮಾನ 15 ವರ್ಷಕ್ಕೆ ಸಾಮಾನ್ಯವಾಗಿ ಲೆಕ್ಕ ಹಾಕಿದರೆ 1,300, 1,350 ಅಥವಾ 1,400 ರೂಪಾಯಿಗಳು ಆಗುತ್ತವೆ. ಈ ಮಸೂದೆಯಲ್ಲಿ ಒಂದು ಎಕರೆಗೆ ಅಂದಾಜು 1,400 ರೂಪಾಯಿಗಳನ್ನು ಕೊಡಿಸುವುದರಲ್ಲಿ ಯಾವ ಸಾಮಾನ್ಯ ಜನಗಳಿಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂಬುದನ್ನು ಜನರೇ ಪ್ರಶ್ನೆ ಮಾಡುತ್ತಾರೆ. ಕಾರಣ ಗ್ರಾಮಗಳ ಕಡೆ ಕಡಮೆ ಬೆಲೆಗೆ ಭೂಮಿ ಸಿಕ್ಕುವಾಗ ದುಬಾರಿ ಕಾಂಪೆನ್‌ಸೇಷನ್ ಕೊಡಿಸುವುದು, ಪಟ್ಟಣಗಳ ಕಡೆ ಭೂಮಿಗೆ

ಕಡಮೆ ಕಾಂಪೆನ್ಸೇಷನ್ ಕೊಡಿಸುವುದು ಯಾವ ನ್ಯಾಯ? ಏತಕ್ಕೋಸ್ಕರ ಲ್ಯಾಂಡ್ ರಿಫಾರಮ್ಸ್ ಬರಬೇಕ್ಕು ಎಂದು ಜನರೇ ಕೇಳುತ್ತಾರೆ. ಆಯಾ ವರ್ಷದ ಜುಮ್ಮಾ ಮಾರ್ಕೆಟ್‌ರೇಟ್ ಮೇಲೆ ಹಿಂದಿನ ಐದು ವರ್ಷಗಳ ಲೆಕ್ಕ ತೆಗೆದುಕೊಂಡು ದಾವಾಷಾರೆಕ್ಕ ಹಾಕಿ ಜಮೀನಿನ ಬೆಲೆ ನಿಗದಿ ಮಾಡಿ ಪರಿಹಾರ ಕೊಡಲು ಏರ್ಪಡಿಸಬೇಕು. ಐದು ವರ್ಷಗಳಲ್ಲಿ ಈ ಶಾಸನ ಜಾರಿಗೆ ಬರುವ ದಿನದಿಂದ ಹಿಂದೆ ಆಯಾ ಪ್ರದೇಶಗಳಲ್ಲಿ ಜಮೀನಿನ ಬೆಲೆ ಏನಿತ್ತೆಂಬುದನ್ನು ಪರಿಶೀಲಿಸಬೇಕು. ಈ ರೀತಿ ಲ್ಯಾಂಡ್ ಕಮಿಷನರ್ ಅವರು ಮಾರ್ಕೆಟ್ ಬೆಲೆಗನುಸಾರವಾಗಿ ದರ ನಿಗದಿ ಮಾಡುವಾಗ ಖುಷ್ಕಿಯಾದರೆ ಎಕರೆಗೆ 50 ರೂಪಾಯಿಗಳಂತೆಯೂ, ತರೀಯಾದರೆ ಎಕರೆಗೆ 100 ರೂಪಾಯಿಗಳಂತೆಯೂ ಹೆಚ್ಚು ಜಾಸ್ತಿ ಸೇರಿಸಿಕೊಡಬೇಕು. ಅದು ನ್ಯಾಯವಾಗಿರುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ.

ಭೂ ಒಡೆತನ ಹೊಂದಿರುವ ಅನೇಕರು ಸಣ್ಣ ಇನಾಂದಾರರಿಂದ 20-25 ವರ್ಷಗಳ ಹಿಂದೆಯೇ ಇನಾಂ ಭೂಮಿಗಳನ್ನು ಪಡೆದು ಅದನ್ನು ಬೇರೆಯವರಿಗೆ ಮಾರಿರುವುದೂ ಉಂಟು. ಹಾಲು ಉಳಿಸಿಕೊಂಡಿರುವುದೂ ಉಂಟು. ಅಂತಹ ಭೂ ಮಾಲೀಕರು ಇದ್ದರೆ ಅವರಿಗೆ ಇತರರಂತೆ ನ್ಯಾಯವಾದ ಪರಿಹಾರ ದೊರಕಿಸಿಕೊಡಲು ಶಾಸನದಲ್ಲಿ ಸೇರಿಸಬೇಕು. ಯಾರಿಗೇ ಆಗಲಿ ಭೂಸುಧಾರಣೆಯಿಂದ ನ್ಯಾಯ ದೊರಕಬೇಕು. ಭೂ ಮಾಲೀಕರಿಗೂ ಸಹ ಪರಿಹಾರ ಸಿಕ್ಕುವ ವ್ಯವಸ್ಥೆ ಆಗಬೇಕು. ಅವರಿಂದ ಅವರ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯವಾಗಬೇಕು.

ಇನ್ನು ಸೆಕ್ಷನ್ 71ರಲ್ಲಿ ಪ್ಲಾಂಟೇಷನ್ಸ್ ವಿಷಯ ಹೇಳಿದ್ದೀರಿ. ಈ ಕಾಯಿದೆ ಅಮಲಿನಲ್ಲಿ ಬರುವವರೆಗೂ ಜಮೀನುದಾರ ಸಾಧ್ಯವಿದ್ದಷ್ಟು ಪ್ಲಾಂಟೇಷನ್‌ಗಳನ್ನು ಬೆಳೆಸುವುದಕ್ಕೆ ಅವಕಾಶವಿದೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ಯಾವ ರೀತಿಯಿಂದಾಗಲಿ ಹಣಗಾರನಾದರೆ ಅವನು ಒಂದು ಅಡಿಕೆ ಗಿಡ, ತೆಂಗಿನ ಗಿಡ ಹಾಕಿ, ಚೆನ್ನಾಗಿ ಬೆಳೆಸುತ್ತಾನೆ. ಭೂಮಿಯನ್ನು ಉಳಿಸಿಕೊಳ್ಳಬೇಕೆಂಬ ಒಂದು ಆಶೆಯಿಂದ ಭೂಮಿಯಲ್ಲಿ ಚೆನ್ನಾಗಿ ವ್ಯವಸಾಯ ಮಾಡುತ್ತಾನೆ. ಇದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ.

ಇನ್ನು ಕುಟುಂಬ ಹಿಡುವಳಿ ವಿಷಯದಲ್ಲಿ ಮೂರ ರಷ್ಟು ಎಂಬುದಾಗಿ ಈ ಮಸೂದೆಯಲ್ಲಿ ಸೂಚಿಸಲಾಗಿದೆ. ಎಂಟು ಜನರಿರುವವರಿಗೆ ಡಬ್ಬಲ್ ಎಂದರೆ ಆರರಷ್ಟು ಎಂಬುದಾಗಿ ಕುಟುಂಬ ಹಿಡುವಳಿ ಮಾತ್ರ ಇದೆ. ಅದಕ್ಕಿಂತ ಅಧಿಕ ಸಂಖ್ಯೆಯಲ್ಲಿದ್ದರೆ ಅವಕಾಶ ಇಲ್ಲವೆಂದು ಸೂಚಿಸಲಾಗಿದೆ. ಯಾವ ಕುಟುಂಬಗಳನ್ನು ಛಿದ್ರಛಿದ್ರ ಮಾಡುವುದು ಸರಿಯಲ್ಲ. ಎಂಟು ಜನಗಳಿಗೆ ಮೇಲ್ಪಟ್ಟು ಇರತಕ್ಕ ಒಂದು ಕುಟುಂಬದಲ್ಲಿ ಒಬ್ಬೊಬ್ಬರಿಗೆ ಒಂದು ಬೇಸಿಕ್ ಹೋಲ್ಡಿಂಗ್‌ನಷ್ಟು ಜುಮ್ಮಾ ಸೇರಿಸಿಕೊಡಬೇಕು. ಸರ್ಕಾರದ ನೌಕರರಿಗೆ ಆರೀತಿ ಇರುವುದನ್ನು ವಜಾ ಮಾಡಬೇಕು. ಒಂದು ಕಡೆ ಬೇರೆ ವಮಾನ ಬಂದಿರುವವರು ಒಂದು ಕುಟುಂಬದಲ್ಲಿದ್ದರೆ ಅಂತಹವರನ್ನು ಈ ಕಾನೂನಿಗೆ ಅನ್ವಯಿಸುವಂತೆ ಸೇರಿಸಕೂಡದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಕಬ್ಬು ಬೆಳೆಯ ಹಿಡುವಳಿದಾರರಾದ ಸಕ್ಕರೆ ಮಿಲ್‌ನವರಿಗೆ ಆರನೆಯ ಒಂದು ಭಾಗ ಕೊಡಬೇಕು ಎಂದು ಹೇಳುತ್ತೇನೆ. ಅವಕ್ಕೆ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಳ್ಳಬೇಕು. ಅವರಿಗೆ ಎಷ್ಟು ವರ್ಷಾನುಭವಿದೆ, ಅವರಿಗಿರತಕ್ಕ ಭೂಮಿ ಸಾಕಾಗುತ್ತದೆಯೇ ಎಂಬುದನ್ನು ನೋಡಬೇಕು. ಅವರು ಸರ್ಕಾರದವರಿಂದ ಭೂಮಿಯನ್ನು ಪಡೆದಿರುತ್ತಾರೆ. ಯಶಸ್ವಿಯಾಗಿ ಆ ಬೆಳೆಯನ್ನು ಅವರೇ ಬೆಳೆದುಕೊಂಡು ಕೊನೆಗೆ ರೈತರಿಗೆ ಗೇಣಿ ಕೊಡದೆ ಇರುವ ಹಾಗೆ ವ್ಯವಸಾಯ ಮಾಡುತ್ತಾರೆ. ಆದ್ದರಿಂದ ಅಂತಹವರ ಬಗ್ಗೆ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಂಡು ಸೀಲಿಂಗನ್ನು ನಿಗದಿ ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ. ಅವರು ಖಾಸಗಿಯವರಿಂದ ಕೊಂಡ ಜಮೀನನ್ನು ಗಣನೆಗೆ ತಂದುಕೊಳ್ಳಬೇಕು.

ಇನ್ನು ಸಹಕಾರ ಕೃಷಿ ಪದ್ಧತಿ ವಿಚಾರದಲ್ಲಿ ಹೇಳಬೇಕಾದರೆ, ನಾವು ಎಷ್ಟರಮಟ್ಟಿಗೆ ಈ ಕೋ-ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಪ್ರಗತಿಹೊಂದಿದ್ದೇವೆ ಎಂಬುದನ್ನು ಯೋಚನೆ ಮಾಡುವುದಾದರೆ, ಸರ್ಕಾರದವರೇನೋ ಎಲ್ಲಾ ವಿಚಾರದಲ್ಲೂ ಕೋ-ಆಪರೇಟಿವ್ ಫಾರಂ ಸ್ಕೀಮುಗಳನ್ನು ಬಹಳ ವ್ಯಯಾಸ ಪಟ್ಟು ಮಾಡಿದ್ದಾರೆ. ಆದರೆ ಅನೇಕ ಕಡೆಗಳಲ್ಲಿ ಅದು ಸಕ್ಸೆಸ್‌ಫುಲ್ ಆಗಿಲ್ಲ. ಈ ಸಂದರ್ಭ ಇರುವಾಗ ಈಗ ಕೋ-ಆಪರೇಟಿವ್ ಫಾರಂ ಕೂಡಲೆ ಜಾರಿಗೆ ತರುತ್ತೇವೆಂದು ಹೇಳುವುದರಿಂದ ಸರ್ಕಾರದವರೇ ಭೂಮಿಯನ್ನು ಆ ಮೂಲಕ ಕೊಡುವ ಸಂದರ್ಭ ಕೆಲವು ಕಡೆಗಳಲ್ಲಿ ಉಂಟಾಗಿದೆ. ನಮ್ಮ ಭದ್ರಾ ಜಲಾಶಯದ ಬಲ ಭಾಗದ ಮತ್ತು ಎಡಭಾಗದ ನಾಲೆಯ ಅಚ್ಚುಕಟ್ಟಿನಲ್ಲಿ ಬಹಳ ಭೂಮಿ ಇದೆ. ಕೋ-ಆಪರೇಟಿವ್ ಫಾರ್ಮಿಂಗಿಗೆ ಜಮೀನು ಕೊಡಬೇಕೆಂದ ಒಂದು ಕಡೆ ನಡೆದಿದೆ. ಆದರೆ ಆ ರೀತಿ ಕೊಡುವಾಗ ಅವರು ಯಾವ ರೀತಿಯ ಯೋಜನೆಯನ್ನು ಇಟ್ಟುಕೊಂಡಿದ್ದಾರೆ, ಅವರಿಂದ ಮಾಡಲಿಕ್ಕೆ ಸಾಧ್ಯವೇ, ಹೊಸದಾಗಿ ಬಂಜರು ಜಮೀನನ್ನು ಸಾಗುವಳಿಗೆ ತರಬೇಕಾದರೆ ಎಷ್ಟುಮಟ್ಟಿಗೆ ಸಾಧ್ಯ, ಸರಿಯಾದ ನಾಯಕತ್ವವಿದೆಯೇ, ಇಲ್ಲವೇ ಎಂಬ ಅಂಶಗಳನ್ನೆಲ್ಲ ಸರ್ಕಾರದವರು ಪೂರ್ಣವಾಗಿ ವಿಚಾರ ಮಾಡಿ ಕೋ-ಆಪರೇಟಿವ್ ಫಾರ್ಮಿಂಗ್ ಜಾರಿಗೆ ತರಬೇಕು. ಒಂದು ಉದ್ಯಮ ಅಥವಾ ಕನಬು ಯಶಸ್ವಿಯಾಗಬೇಕಾದರೆ ಅದರಲ್ಲಿ ಪೂರ್ಣ ಪರಿಶ್ರಮವಿರುವಂಥವರಿಗೆ ಅದನ್ನು ವಹಿಸಬೇಕು. ಕೋ-ಆಪರೇಟಿವ್ ಫಾರ್ಮಿಂಗ್ ಪ್ರಾಯೋಗಿಕ ಕ್ಷೇತ್ರಗಳಲ್ಲಿ ಮಾಡಿರುವ ಕಡೆ ಯಶಸ್ವಿಯಾಗಿದೆ ಯೆಂದು ನನಗನ್ನಿಸುವುದಿಲ್ಲ. Co-operative farming ಎನ್ನುವುದನ್ನು ನಾವುಗಳೇ ಸರಿಯಾಗಿ ತಿಳಿದುಕೊಳ್ಳದೆ ಇರುವುದರಿಂದ ಜನಸಾಮಾನ್ಯರಿಗೆ ಹೇಗೆ ಸಾಧ್ಯ? ಜನಸಾಮಾನ್ಯರು ಸಹಕಾರ ಪದ್ಧತಿಯನ್ನೂ ಮತ್ತು ಅದರಿಂದ ಪ್ರಯೋಜನ ವಿದೆಯೆಂಬುದನ್ನೂ ತಿಳಿಯುವವರೆಗೂ ಕಾಯಬೇಕು, ದುಡುಕಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸಾರ್ವಜನಿಕ ಸೇವಾಸಂಘಗಳು, ಸಂಸ್ಥೆಗಳು ಇವುಗಳಿಗೆ ಸೇರಿದ ಜಮೀನನ್ನು ಗೇಣಿಗೆ ಕೊಡುವುದಕ್ಕೆ ಅವಕಾಶವಿರಬೇಕು. ಅನೇಕ ಕಡೆ ಹಾನ್ವಲಗಳು ಮತ್ತು ಸಂಸ್ಥೆಗಳಿಗೆ ಭೂಮಿಯನ್ನು ಕೊಟ್ಟಿದ್ದಾರೆ. ಅಂಥ ಜಮೀನುಗಳನ್ನು ಗೇಣಿಗೆ ಕೊಟ್ಟು ಅದರ ಉತ್ಪತ್ತಿಯಿಂದ ಅವುಗಳನ್ನು ನಡೆಸುತ್ತಿದ್ದಾರೆ. ಹಾನ್ವಲನವರೇ ವ್ಯವಸಾಯ ಮಾಡುತ್ತೇವೆಂದರೆ ಅದು ಬೇರೆ ವಿಷಯವಾಯಿತು. ವಿದ್ಯಾಸಂಸ್ಥೆಗಳು ಸೇವಾ ಸಂಸ್ಥೆಗಳು ಇವುಗಳಿಗೆ ಸಾರ್ವಜನಿಕವಾಗಿ ಯಾವುದಾದರೂ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಜಮೀನನ್ನು ಬಿಟ್ಟಿರುತ್ತಾರೆ. ಅಂಥಾ ಸಂಘ

(ಶ್ರೀ ಡಿ. ಟಿ. ಸೀತಾರಾಮರಾವ್)

ಸಂಸ್ಥೆಗಳಿಗೆ ಜಮೀನನ್ನು ಗೇಣಿಗೆ ಕೊಡಲಕ್ಕೆ ಅವ ಕಾಶವಿರಬೇಕೆಂದು ಸಲಹೆ ಮಾಡುತ್ತೇನೆ. ಮತ ಸಂಬಂಧವಾದ ಸಂಘಸಂಸ್ಥೆಗಳಿಗೆ ಇಂಥ ಅವಕಾಶ ವನ್ನು ಕೊಡಬೇಕಾಗಿಲ್ಲ.

ನನಗೆ ಮಾತನಾಡಲು ಹೆಚ್ಚು ಕಾಲಾವಕಾಶವಿಲ್ಲ. ನನ್ನ ಮಾತನ್ನು ಬೇಗ ಮುಗಿಸಬೇಕೆಂದು whip ಆಫ್ಸ್ ಕೊಡಿಸುತ್ತಿದ್ದಾರೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ. ನಾನು ವ್ಯವಸಾಯದ ಮನೆತನದಲ್ಲಿ ಹುಟ್ಟಿ, ಅನಂತರ ವರ್ತಕನಾಗಿ ಈಗ ಜನಗಳ ಸೇವೆಯನ್ನು ಮಾಡು ವುದಕ್ಕೆ ಬಂದಿರುತ್ತೇನೆ. ನಾವು ಜನರ ಪ್ರತಿನಿಧಿ ಗಳಾಗಿ ಇಲ್ಲಿಗೆ ಬಂದಿರುವುದರಿಂದ ನಮ್ಮ ಅಭಿಪ್ರಾಯ ಗಳನ್ನು ಕೊಡಲು ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[Sri L. B. BIRJE (Khanapur) spoke in Marathi].

Sri L. S. VENKAJI RAO (Basavangudi).—Mr. Speaker, Sir, I do not propose to take more than a few minutes. I am of opinion that a portion of my friend Sri Birje's speech must be taken into consideration. That is in connection with the question of compensation. I am of the same opinion as he is. Of course, my opinion is based upon experience and also statistics. We have to take into consideration the existing value of the lands in various parts of old Mysore. For instance, the value of wet lands in the Tunga Canal area was about Rs. 300 to Rs. 350 in 1952-53. Same lands near Srirangapatnam were costing from Rs. 2,500 to Rs. 3,000 during the years 1952-53, but the income from the land in both these places does not vary accordingly in the same proportion as compared to the value of the lands in these places. It has been calculated, and with authority, that the yield from wet lands in the Tunga Canal area varies from 15 to 17½ per cent on the capital invested and the yield from the lands in the Srirangapatnam area varies between 6 to 7½ per cent based on the value of the lands in that area. As such, I feel that the compensation should be based upon the value of the land and the surroundings, etc, and that it cannot be stipulated by the same formula *viz.*, on the basis of the yield alone. If my figures are challenged, I am prepared to accept the challenge. Having said this, I personally feel that the compensation must not be one-sided. It should not act as a great burden both on the buyer and on the seller. The terms of the compensation should not vary. If it is to be paid in the shape of bonds, then as mentioned in the Bill, the interest uniformly should not be more than 4½ per cent and tenure should, under no circumstances, be more than 20 years. Otherwise, these bonds will bear comparison with the Zamindari bonds of U.P.

The yield from dry land, as mentioned in the speech of the Hon'ble Minister, is 33⅓ per cent gross, but I cannot agree to this, because the yield varies from land to land and from place to place and it is entirely dependent upon nature. As such it will range from nil per cent to 5 per cent or even 30 per cent. The average of 5 years can never be more than 5 to 12½ per cent. So the compensation, if calculated on the basis of 33⅓ per cent, will be such as will not be acceptable to the owner of the land and it will also not be morally sound.

11-45 A.M.

All these aspects, I believe, will be thrashed out and discussed in the Select Committee and then a decision will be arrived at. These views should be taken into consideration by the Joint Select Committee and the Government.

As far as plantations are concerned, one plantation is different from another. For instance, coconut plantation is different from coffee, tea and rubber plantations. Coffee, tea and rubber plantations are governed by the Industrial Disputes Act and they have to meet a very huge expenditure as they are responsible for providing housing and various other amenities to the labour force. The case is not so with coconut and areca gardens. These factors should be taken into consideration by the Joint Select Committee. An economic unit for anybody would be not less than 200 acres in the case of coffee plantations, 300 to 400 acres in the case of tea plantations and in the case of rubber plantations it would be anywhere between 200 to 300 acres. For example, 100 acres of coffee estate can produce on an average a maximum

of 20 tons. Of course, there are estates in Coorg and other places where the yield is much more than that. But there are estates in Chickmagalur and other places where the yield is more or less depending upon the rain which is rather whimsical.

Sri C. J. MUCKANNAPPA (Gubbi).—I rise to a point of order. The Hon'ble Member Sri Badrinarayan who is an experienced and seasoned legislator is reading 'Samyuktha Karnatak'.

Mr. SPEAKER.—Whoever reads should not do so.

Sri L. S. VENKAJI RAO.—As I said, 100 acres of coffee estate can produce on an average a maximum of 20 tons. The cost of cultivation would be anywhere round Rs. 700 per acre. So, it is evident that in future years the net yield is going to be much less. The present yield based upon previous prices is no doubt higher. This fact should also be taken into consideration by the Joint Select Committee before finalising this Bill.

I have got another point which has not been neglected but has been treated with some indifference at the time of drafting the Bill. I do know that this Bill is not final by itself, that it has to go through so many stages and that many people will have to put their heads together and find a satisfactory solution. The present approach is in a way sentimental and there are socio-economic and psychological aspects involved in this Bill. All these factors have been very well discussed by the Hon'ble Members of this House, but still I feel that a good lot has to be done before it assumes a form which will be acceptable not only to this Hon'ble House but also to the public.

Facts remain that there are divergent views in regard to co-operative farming. We are fortunate in this respect as we have still thousands of acres of Amrit Mahal Kaval which can be placed at the disposal of societies for the purpose of experimentation and if the experiments prove successful then co-operative farming can be accepted. In the meanwhile, embarking too much upon co-operative farming may not prove to be disastrous, but still it is being questioned and the public are feeling a sort of uncertainty about it. Some Hon'ble Members of this House were pleased to say that while the Government contemplate bringing in ceiling on land holdings, the same thing is not thought of in other sectors. In this connection, my Hon'ble friend Sri Ghorpade has already pointed out that in certain cases the taxation comes to 89 per cent, but I may say that in certain cases it comes to 105 per cent. It requires detailed calculation. Corporations in cities and municipalities in towns will be forced to enhance the taxes so that they will be able to provide the conveniences of the public. In my opinion, in five years the taxes will be enhanced by 100 to 150 per cent in certain cases while the rent that may be fixed by the Controller will be based on a net income of 6 per cent and nothing more. So, I am of the opinion that we shall be going through a transformation as it were which is a factor that should be reckoned with by any State Government in this country.

Sri P. G. SIDDHANTI (Muddebihal).—A man of small income cannot bear it.

Sri L. S. VENKAJI RAO.—My Hon'ble friend has misunderstood me. What I meant was that a man getting over and above Rs. 2 to 2½ lakhs will have to pay 105 per cent by way of wealth tax, etc. All that I am saying is that if ceiling on land is introduced, it should also be taken for granted that indirectly there already exists a ceiling on urban income as well.

Sri C. J. MUCKANNAPPA.—To day we are discussing land reforms and we are not bothered about a man getting Rs. 2 to 2½ lakhs.

Sri L. S. VENKAJI RAO.—I do not know why my friend is very particular about getting the results tomorrow itself. Indirectly it is coming. I do believe that the Bill as it is cannot satisfy the people at large. Itmust be liberal in its outlook, liberalf or any man and it should be made easier for the purchaser to pay back the compensation. The compensation that is going to be fixed should not only be based upon fifteen times the average income but it should also have a bearing on the locality, environments, etc.

(SRI L. S. VENKAJI RAO)

With these few words I request the Government to take note of all that has been said and do their best to satisfy the people who are awaiting the results.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಏಳೆಂಟು ದಿನಗಳಿಂದ ಭೂ ಸುಧಾರಣೆಯ ವಿಷಯದ ಮೇಲೆ ತುಂಬ ಜನರು ವಿಮರ್ಶೆ ನಡೆಸಿದ್ದಾರೆ. ಆದರೆ ಇದರಲ್ಲಿ ನನಗೆ ಒಂದು ವಿಶೇಷ ಕಂಡದ್ದು ಇಲ್ಲಿ ಎಷ್ಟೋ ಮಟ್ಟಿಗೆ ಭೂ ಸುಧಾರಣಾ ವಿಧೇಯಕದ ಮೇಲೆ ಹರಿಜನೋದ್ಧಾರದ ಪರವಾಗಿ ಸದಸ್ಯರು ಮಾತನಾಡಿದ್ದಾರೆಂದು. ಅದು ಬಹಳ ವಿರಳ. ನಾನು ಮೊದಲಿನಿಂದಲೂ ಎಲ್ಲರ ಭಾಷಣಗಳನ್ನೂ ಕೇಳಿದ್ದರಷ್ಟೆಕೆ ಯಾರೂ ಈ ವಿಧೇಯಕಕ್ಕೆ ಸಂಬಂಧಪಡುವಂತೆ ಹರಿಜನ ಸದಸ್ಯರು ಏಕೆ ಮಾತನಾಡಲಿಲ್ಲ ಎಂದು ನನಗೆ ಆಶ್ಚರ್ಯ ಕಾಣುತ್ತದೆ. ಯಾರಾದರೂ ಆ ರೀತಿ ಅವಕಾಶ ಪಡೆದಿದ್ದರೂ ಅದೂ ಬಹಳ ಕಡಮೆ ಸಂಖ್ಯೆಯಲ್ಲಿ ಸದಸ್ಯರು ಮಾತನಾಡಿದ್ದಾರೆಂದು ನಾನು ತಿಳಿಯುತ್ತೇನೆ. ಈ ಭೂಸುಧಾರಣೆಯಿಂದ ಹರಿಜನರಿಗೆ, ಬಡವರಿಗೆ ಯಾರಿಗೂ ಅನುಕೂಲವಾಗುವುದಿಲ್ಲವೆಂದೋ ಅಥವಾ ಈ ಸುಧಾರಣೆ ನ್ಯಾಯವಾದ ರೀತಿಯಲ್ಲಿ ಆಗಿಲ್ಲವೆಂದೋ?—ನನಗೆ ಅರ್ಥವಾಗುವುದಿಲ್ಲ. ಈ ಭೂ ಸು ಧಾ ರ ಣೆ ಯ ವಿಧೇಯಕದ ಮೇಲೆ ನಾನಾ ಸದಸ್ಯರು ನಾನಾ ರೀತಿಯಲ್ಲಿ ವಿಮರ್ಶೆಮಾಡಿ ತಮ್ಮ ಚರ್ಚೆಯನ್ನು ಬೆಳೆಸಿದ್ದಾರೆ. ಆದರೆ ಇದರ ಬಗ್ಗೆ ನ್ಯಾಯವಾಗಿ ವಿಮರ್ಶೆ ನಡೆಸಿರುವವರು ಬಹಳ ಕಡಮೆ ಸದಸ್ಯರು ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಈ ವಿಧೇಯಕ ಅಥವಾ ಈ ಭೂ ಸುಧಾರಣೆ ಮಸೂದೆ ಬಂದಿರುವುದು ಯಾರಿಗೆಂದರೆ ಉಳುವವರಿಗೆ ಮಾತ್ರ. ಹೊರಗೆ ಬೇರೆ ಕೆಲಸದಲ್ಲಿರುವವರಿಗೆ ಇದರ ಸಂಬಂಧ ವಿಲ್ಲ. ಅವರು ಇದು ನಮಗೇಕೆ ಬಂತು ಎಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ಯಾವ ಒಂದು ಆಧಾರದಿಂದ ಈ ಮಸೂದೆ ಬಂತೆಂಬುದನ್ನು ಯೋಚನೆ ಮಾಡಬೇಕು. ಆದರೆ ಈ ನಥೆಯಲ್ಲಿ ಈ ಮಸೂದೆಯ ವಿಮರ್ಶೆಯನ್ನು ಮಾಡಿದವರಲ್ಲಿ ವ್ಯಾವಹಾರಿಕ ದೃಷ್ಟಿಯಿಂದ ನೋಡಿದವರೇ ಹೆಚ್ಚೆಂದು ನಾನು ಹೇಳಬೇಕೇ ಹೊರತು ತಾತ್ವಿಕ ದೃಷ್ಟಿಯನ್ನಿಟ್ಟುಕೊಂಡು ಚರ್ಚೆ ಮಾಡಿದವರು ಬಹಳ ಕಡಮೆ. ಯಾರ ಭೂಮಿಯನ್ನೋ ಯಾರಿಗೋ ಕೊಡುವುದು ಇದು ಯಾವ ನ್ಯಾಯ, ಯಾವ ಧರ್ಮ ಎಂದು ಹೇಳುತ್ತಾರೆ. ಜಮೀನು ಹಂಚಿಕೆಯ ವಿಚಾರದಲ್ಲಿ ಸರ್ಕಾರದವರು ಬಹಳ ಜಾಗರೂಕತೆಯಿಂದ ಇರಬೇಕು. ಇದರ ಮೂಲತತ್ವವನ್ನು ವಿಚಾರ ಮಾಡಬೇಕು. ದೇಶದ ಅನೇಕ ಭಾಗಗಳಿಂದ ಈ ವಿಚಾರವನ್ನು ಇಲ್ಲಿ ಚರ್ಚೆಗೆ ಏಕೆ ತಂದಿರಿ, ಈ ಮಸೂದೆ ಈಗ ಏಕೆ ಬಂತು ಎಂಬುದಾಗಿ ಅನೇಕರು ಪ್ರಶ್ನೆ ಹಾಕಿದ್ದಾರೆ. ರೈತ ಹೊಲವನ್ನು ಉಳುವವನು, ಅವನೇ ದೇಶದ ಬೆನ್ನೆಲುಬು ಎಂಬುದಾಗಿ ನಾವೆಲ್ಲರೂ ತಿಳಿದಿದ್ದೇವೆ. ಬಡ ರೈತನ ಬಾಳನ್ನು ಕುರಿತು ಈ ಕೆಳಗಿನ ಉದಾಹರಣೆ ಹೇಳತ್ತೇನೆ. ಒಬ್ಬ ಗಾಡಿಯಾಳು ತನ್ನ ಎತ್ತನ್ನು ಗಾಡಿಗೆ ಕಟ್ಟಿ ಅದಕ್ಕೆ ರಕಾದ ಹುಲ್ಲು, ಹರುಳಿ, ಬಗ್ಗೆರೆ ತಿಂಡಿಹಾಕದೆ ಸಬಕನ್ನು ಎಳೆಸುತ್ತಾನೆ. ಒಂದು ದಿನ ಆ ಎತ್ತುಗಳಿಗೆ ಸರಿಯಾಗಿ ಹುಲ್ಲು, ಹುರುಳಿ ಕೊಡದೆ ಅವುಗಳ ಮೇಲೆ ಭಾರಿ ಹೊರೆ ಹಾಕಿ ಅವನ್ನು ಚೆನ್ನಾಗಿ ಹೊಡೆದು ದುಡಿಸುತ್ತಾನೆನ್ನೋಣ. ಆಗ ಅದು ಪಾಪ, ಎಷ್ಟು ಭಾರ ಹೊತ್ತೀತು, ಎಷ್ಟು ಏಟುಗಳನ್ನು ತಿಂದೀತು? ಯಾವಾಗಲಾದರೂ ಒಂದು ದಿನ ಎಲ್ಲೋ ಒಂದ ಸ್ಥಳದಲ್ಲಿ ಅದು ಮುಗ್ಗರಿಸಿ ಬೀಳುತ್ತದೆ. ಆಗ ಗಾಡಿಯವನು ಅಯ್ಯೋ ನನ್ನ ಗಾಡಿಹೋಯಿತೇ, ನನ್ನ ಎತ್ತುಗಳಿಗೆ ಗಾಯವಾಯಿತೆ ನನಗೆ ಈಗ ಎತ್ತುಗಳಲ್ಲವೇ ಎಂದು ಹೇಚಾಡಿಕೊಂಡು, ನಾನು ಎತ್ತುಗಳಿಗೆ ಚೆನ್ನಾಗಿ ಹುಲ್ಲು ಹಾಕಬೇಕಾಗಿತ್ತು, ತಿಂಡಿಕೊಡಬೇಕಾಗಿತ್ತು, ಚೆನ್ನಾಗಿ ಸಾಕಬೇಕಾಗಿತ್ತು ಅದರ ಮೇಲೆ ಹಾಕಿದ ಹೊರೆ ಜಾಸ್ತಿಯಾಯಿತು, ಅದಕ್ಕೋಸ್ಕರವೇ ಇಂತಹ ವಿಪತ್ತು ತನಗೆ ಒದಗಿತು, ಎಂದು ತನ್ನ ಮನಸ್ಸಿಗೆ ವಿವೇಕವನ್ನು ತಂದುಕೊಂಡು, ಅಂದಿನಿಂದ ಎತ್ತುಗಳನ್ನು ಚೆನ್ನಾಗಿ ಕಾಪಾಡುತ್ತಾನೆ. ಅದೇ ರೀತಿ ದೇಶವಾದ್ಯಂತ ಎಲ್ಲಾ ಜನರಿಗೂ ಅನ್ನವನ್ನು ಒದಗಿಸತಕ್ಕಂಥ ರೈತ ಬೆಳಗಿನಿಂದ ಸಂಜೆಯವರೆಗೂ, ಚಳಿ, ಮಳೆ, ಬಿಸಿಲು, ಗಾಳಿಯನ್ನದೆ ಹೊಲದಲ್ಲಿ ಕೆಲಸಮಾಡಿ ತನ್ನ ದೇಹದ ಸೌಖ್ಯವನ್ನೇ ಮರೆತು ತನ್ನ ಶ್ರಮದಿಂದ ಏನಾದರೂ ತನಗೂ ಪರಿಹಾರ ಸಿಕ್ಕಲಿ ಎಂಬ ಉದ್ದೇಶವನ್ನಿಟ್ಟುಕೊಂಡು ಚೆನ್ನಾಗಿ ಬೆಳೆಯಬೇಕು ಎಂಬ ಮನೋಭಾವವನ್ನು ತಾಳಿ ದುಡಿಯುತ್ತಾನೆ. ನಮ್ಮ ದೇಶದ ಮುಖಂಡರು ತೋರಿಸಿಕೊಟ್ಟಿರುವ ಹಾದಿಯನ್ನನುಸರಿಸಬೇಕೆಂದು ಭಾವಿಸಿಕೊಂಡು ಕೆಲಸ ಮಾಡುತ್ತಾನೆ. ಅಂತಹವನಿಗೆ ಸಂಬಂಧಪಟ್ಟ ವಿಧೇಯಕವನ್ನು ಎಂದರೆ ಈ ಭೂಸುಧಾರಣೆಯ ಮಸೂದೆಯನ್ನು ಇಲ್ಲಿ ಚರ್ಚೆಗೆ ತಂದಿರುವುದನ್ನು ನೋಡಿದರೆ ಅಂತಹ ಬಡ ರೈತನಿಗೆ ಈ ಮಸೂದೆಯಲ್ಲಿ ಕೊಟ್ಟಿರುವ ಸೌಲಭ್ಯಗಳು ಏನೇನೂ ಇಲ್ಲ ಎಂದು ಹೇಳಬಹುದು. ಆ ರೀತಿ ಇದ್ದರೂ ಬಹಳ ಕಡಮೆ ಎಂದು ನಾನು ಹೇಳುತ್ತೇನೆ. ಏಕೆ ಈ ರೀತಿ ಹೇಳುತ್ತೇನೆಂದರೆ, ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಶೇಕಡ 65.86 ಅಂಶ ಗೇಣಿ ಒಕ್ಕಲುಗಳಿದ್ದಾರೆ. ಆ ಒಕ್ಕಲುಗಳಲ್ಲಿ ಅನೇಕರು ಸಣ್ಣ ಹಿಡುವಳಿದಾರರ ಒಕ್ಕಲುಗಳೇ ಆಗಿದ್ದಾರೆ. ಅಂತಹವರಿಗೆ ಈ ವಿಧೇಯಕದ ರೀತಿಯಲ್ಲಿ ಕಾನೂನುಗಳನ್ನು ಜಾರಿಗೆ ತಂದರೆ ಅವರವರೇ ತಮ್ಮ ಹಿಡುವಳಿಗೆ ಸಂಬಂಧಪಟ್ಟ ಹಿಡುವಳಿಯ ಭೂಮಿಯನ್ನು ಪಡೆಯುತ್ತಾರೆ. ಆಗ ಒಕ್ಕಲುಗಳು ಗಂಟು ಮೂಟೆ ಕಟ್ಟಿಕೊಂಡು ಬೇರೆ ಕಡೆಗಳಿಗೆ ಓಡಿಹೋಗಬೇಕಾಗುತ್ತದೆ. ಅವರಿಗೆ ವಸತಿಗೆ ಮನೆಯಿಲ್ಲದಾಗುತ್ತದೆ. ಕೆಲಸಕ್ಕೆ ಗದ್ದೆ ಇಲ್ಲವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವವರಿಗೆ ಈ ರೀತಿ ಕಾನೂನುಗಳನ್ನು ಅಮಲಿನಲ್ಲಿ ತರುವುದು ಸರಿಯಲ್ಲ. ಅದರ ಜೊತೆಗೆ ಕೆಲವರು 3,600 ರೂಪಾಯಿಗಳು ಫ್ಯಾಮಿಲಿ ಹೋಲ್ಡಿಂಗ್, 1,800 ರೂಪಾಯಿಗಳು ಬೇಸಿಕ್ ಹೋಲ್ಡಿಂಗ್ ಪರಮಾವಧಿ ವಿಸ್ತೀರ್ಣವೆಂದು ಹೇಳಿದರು. ಅದು ಕಮ್ಮಿ, ಹೆಚ್ಚು ಎಂದು ಮತ್ತೆ ಕೆಲವರು ವಾದಿಸಿದರು. ಅದರ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ವಿಧೇಯಕದಲ್ಲಿ ಯಾವ ಒಂದು ವರ್ಗಕ್ಕೆ ಚೆನ್ನಾಗಿ ಅನುಕೂಲವಿಡಿಸಿಕೊಡಬೇಕಾಗಿತ್ತೋ ಅವನ್ನು ಕೊಟ್ಟಿಲ್ಲ. ಅದರ ವಿವರಣೆಯನ್ನು ಗಣನೆಗೇ ತೆಗೆದುಕೊಂಡಿಲ್ಲ. ಗದ್ದೆಯಲ್ಲಿ ನಿಜವಾಗಿ ಗೆಯ್ಯುವವರು ಅವರೇ. ಸುಮಾರು ಎಂಭತ್ತು ಎಕರೆ ಜಮೀನನ್ನು ಇಟ್ಟುಕೊಂಡು ನಾವು ಸ್ವತಃ ವ್ಯವಸಾಯ ಮಾಡುವವರು ಎನ್ನುವವರಿದ್ದಾರೆ.

ಎಲ್ಲರೂ ಆ ವಿಷಯದ ಬಗ್ಗೆ ಅವರವರ ಪರಿಸ್ಥಿತಿಯನ್ನು ಪ್ರತಿಪಾದಿಸಿದರು. ಇದುವರೆಗೂ ಕೇಳಿದಂತೆ ಶ್ರೀ ರಾಮಕೃಷ್ಣ ಹೆಗ್ಡೆಯವರು ಮಾತ್ರ ನಿಜವಾದ ರೈತನ ಬಗ್ಗೆ ಕೆಲವಾರು ವಿಚಾರಗಳನ್ನು ಹೇಳಿದರು. ಶ್ರೀ ಜತ್ತಿಯವರ ವರದಿ ಬಂದನಂತರ, ಈ ವಿಧೇಯಕ ಬಂದನಂತರ, ವ್ಯವಸಾಯ ಕಸಬನ್ನು ಅವಲಂಬಿಸಿರುವವರು, ಆ ಕಸಬಿನಲ್ಲಿ ಆಸಕ್ತಿಯಿರುವವರು, ಜಮೀನು ಇದ್ದವರೂ ಜಮೀನು ಏನೂ ಇಲ್ಲದವರೂ ಈಗಾಗಲೇ ಭೂ ಸುಧಾರಣೆಯ ಅನುಕೂಲ ಮತ್ತು ಅನನುಕೂಲಗಳನ್ನು ಹೇಳಿಕೊಂಡಿದ್ದಾರೆ. ಈ ಮಸೂದೆ ಬಂತಲ್ಲಾ, ಇನ್ನೇನು ಇದರಿಂದ ಬಡ ಒಕ್ಕಲುತನದವರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಬಹಳ ಸಂತೋಷದಿಂದಿದ್ದರು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಒಕ್ಕಲಿಗರು, ಹರಿಜನರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಆದರೆ ಇಲ್ಲೇ ವಿಷಯಗೊತ್ತು. ಸಾಮಾನ್ಯವಾಗಿ ಕೆಲವರೆಲ್ಲರೂ ಎಂ.ಎಲ್.ಎಗಳು ಭೂ ಮಾಲೀಕರು. ಅಂತಹವರಿರುವಾಗ ಅವರವರೇ ವ್ಯವಸಾಯ ಮಾಡಿಕೊಳ್ಳುತ್ತಿದ್ದಾರೆಂದರೆ ಅದು ಅಪ್ಪಾಗಿ ನಿಜವಲ್ಲ. ಒಕ್ಕಲುತನದವರಿಂದ ಮಾಡಿಸುತ್ತಿದ್ದಾರೆಂದು ನಾನು ನಂಬಬೇಕೇನೆ. ಈ ಮಸೂದೆ ಜಾಗ್ರತೆ ಅಮಲನಲ್ಲಿ ಬರಬೇಕೆಂದು ಅವರೇ ಹೇಳುತ್ತಾರೆ. ಮತ್ತೊಂದು ಸಾರಿ ಅವರೇ ಆ ಬಗ್ಗೆ ಇಲ್ಲಿ ವಿರೋಧಿಸುತ್ತಾರೆ. ಇದು ನನಗೆ ಆಶ್ಚರ್ಯವಾಗಿದೆ. ನಿಜವಾಗಿ ಅವರಿಗೆ ಇದರಿಂದ ಅನುಕೂಲವಾಗುತ್ತದೆಂದು ತಿಳಿದು ಅವರು ಸಂತೋಷಪಡುತ್ತಾರೆ. ಏನೇ ಆಗಲಿ, ಸರ್ಕಾರದವರು ನಿಜವಾಗಿ ಗದ್ದೆಯಲ್ಲಿ ಕೆಲಸಮಾಡುವಂತಹವನ ಕಡೆಗೆ ಹೆಚ್ಚು ಗಮನ ಕೊಟ್ಟಂತೆ ಕಾಣುವದಿಲ್ಲ. ನಿಜವಾಗಿ ಅವರಿಗೆ ಬರಬೇಕಾದನ್ನು ಅವರು ಕೇಳಿದರೆ, ನಿಮಗಿನ್ನೇನಾಗಬೇಕು ಎಂದು ಹೇಳಿಬಿಡುತ್ತಾರೆ. ಅವರಿಗೆ ಕೊಡತಕ್ಕ ಪರಿಹಾರದ ಬಗ್ಗೆ ಈ ವಿಧೇಯಕದಲ್ಲಿ ತಪ್ಪು ಇದೆಯೆಂದು ಕಾಣುತ್ತದೆ. ಆದಕಾರಣ ನಮ್ಮ ಜಿಲ್ಲೆಯಲ್ಲಿ ಕೆಲವರು ಏನು ಯೋಚನೆ ಮಾಡಿದಾರೆಂದರೆ ಯಾರು ಗದ್ದೆಯಲ್ಲಿ ಗೇಣಿದಾರನಾಗಿ ಕೆಲಸ ಮಾಡುತ್ತಾನೋ ಅವನು ಅದೇ ಗದ್ದೆಯಲ್ಲಿ ಬೇಸಾಯ ಮಾಡಬೇಕು. ಗೇಣಿ, ತುಂಬ ಕಡಮೆ ಯಾಗಬೇಕು, ಇದನ್ನು ಪರಿಹಾರ ಸಿಕ್ಕುವ ದೃಷ್ಟಿಯಿಂದ ಮಾಡಲಾಗಿದೆ ಎಂದು ಕೆಲವರು ಹೇಳಿದ್ದಾರೆ. ಆದ್ದರಿಂದ ಕುಟುಂಬ ಹಿಡುವಳಿಯೇ ಇರಲಿ, ಮೂಲ ಹಿಡುವಳಿಯೇ ಇರಲಿ, ಅವಕಾಶ ಬರ್ಚು ಮಾಡುವಂಥ ಸಂಪೂರ್ಣ ಹಕ್ಕು ಒಕ್ಕಲಿಗರಿಗೆ ತಾತ್ಕಾಲಿಕವಾಗಿಯಾದರೂ ಇರಬೇಕು. ಗೇಣಿ ಕಡಮೆಯಾಗಿ ಒಕ್ಕಲಿಗೆ ಭದ್ರತೆ ಬೇಕು. ಎಷ್ಟೋ ಮಂದಿ ಗದ್ದೆಯಲ್ಲಿ ದುಡಿಯುತ್ತಾರೆ ಹರಿಜನರು, ಗಿರಿಜನರು ಎಲ್ಲರೂ ದುಡಿಯುತ್ತಾರೆ. ಇವರೆಲ್ಲ ಆರ್ಥಿಕ ಕೆಳಮಟ್ಟದವರು. ಈ ರೈತ ಕೂಲಿಯಾಳುಗಳಿಗೆ minimum wages ಮಾಡಿದ್ದೇವೆ ಎಂದು ಹೇಳಿದಾರೆ. ಅದರಿಂದ ಏನಾದರೂ ಪ್ರಯೋಜನವಾಗಬಹುದೋ ಏನೋ! ಈಗಾಗಲೇ ಭೂ ಮಾಲೀಕರು ಕೂಲಿಗಾರರ ಅಭಾವದಿಂದ ತಮಗೆ ಭೂಮಿ, ಗದ್ದೆ ಬೇಡ ಎಂದು ಹೇಳುವ ಸ್ಥಿತಿಯಲ್ಲಿದ್ದಾರೆ. ಕೆಲವೊಮ್ಮೆ ಕಡೆ ದಿನಕ್ಕೆ ಎರಡು ಎರಡೂವರೆ ರೂಪಾಯಿ ಇಲ್ಲದೇ ಕೆಲಸಕ್ಕೆ ಬರುವದಿಲ್ಲ ಮತ್ತು ಅವೇಳೆಗೆ ಕೆಲಸಕ್ಕೆ ಬರುತ್ತಾರೆ. ಅಂಥ ಪರಿಸ್ಥಿತಿ ಬಂದರೆ 80 ಎಕರೆ, 90 ಎಕರೆ ಜಮೀನು ಇಟ್ಟುಕೊಳ್ಳುವವರಿಗೆ ಅದರ ಕಷ್ಟಸುಖ ತಿಳಿಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಾತ್ರ ಭೂ ಮಾಲೀಕರಿಗೆ ಬುದ್ಧಿ ಬರುವಂತಾಗುತ್ತದೆ. ಅಂಥ ಪರಿಸ್ಥಿತಿ ಶೀಘ್ರದಲ್ಲಿಯೇ ಬರಬಹುದು. ಆದಕಾರಣ ಈ ಮಸೂದೆಯಿಂದ ಎಷ್ಟು ಜನರಿಗೆ ಹಾನಿಯಾಗುತ್ತದೆಯೋ. ಆರೀತಿ ಆಗದಂತೆ ಪ್ರಯತ್ನ ಮಾಡಬೇಕೆಂದು ನಿಮ್ಮೆಲ್ಲರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ವಿಧೇಯಕವನ್ನು ಯಾರು ತಂದಿದ್ದಾರೆಯೋ ಅವರ ಉದ್ದೇಶ ಚೆನ್ನಾಗಿತ್ತು ಎಂದು ತಿಳಿದಿದ್ದೇನೆ. ಇದಕ್ಕೆ ಕಾಲ ನಿಶ್ಚಿತವಾಗಿದೆ. ವಾತಾವರಣ ಸರಿಯಾಗಿದೆ, ಪರಿಸ್ಥಿತಿ ಸುಧಾರಿಸಿದೆ ಎಂದು ತಿಳಿದೇ ಎಲ್ಲರೂ ಈ ಮಸೂದೆಯನ್ನು ಸಮರ್ಥಿಸುತ್ತ ಬಂದರು. ಅಧಿಕ ಆಹಾರ ಉತ್ಪನ್ನ ಮಾಡಬೇಕು, ರೈತನ ಜೀವನಮಟ್ಟವನ್ನು ಅಭಿವೃದ್ಧಿಗೊಳಿಸಬೇಕು, ರೈತನಿಗೆ ಗದ್ದೆ ಉಳುವವನಿಗೆ ಲಭುವಿಮೋಚನೆ, ಪರಿಹಾರ ಸಿಕ್ಕಬೇಕು ಎನುವ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದಾರೆ. ಉದ್ದೇಶ ಒಳ್ಳೆಯದು. ಆದರೆ ನಾವು ಕಂದಾಯ ಸಚಿವರಲ್ಲಿ ಖಾಸಗಿಯಾಗಿ ಮಾತನಾಡಿದಾಗ ''ಉದ್ದೇಶ ಎಷ್ಟೇ ಉತ್ತಮ ವಿದ್ದರೂ ಎಲ್ಲರೂ ಹೊಂದಿಕೊಂಡು ಕೆಲಸ ಮಾಡದೆ ಇದ್ದರೆ, ಜನಗಳ ಸಹಕಾರವಿಲ್ಲದೆ ಇದ್ದರೆ ಎಷ್ಟು ಪ್ರಯೋಜನವಾಗುವದಿಲ್ಲ'' ಎಂದು ರೆವಿನ್ಯೂ ಸಚಿವರು ಹೇಳಿದರು. ಅವರು ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇವಲ ಕಾನೂನು ಪ್ರಕಾರ ಮಾಡಿದರೆ ಸಂಪೂರ್ಣವಾಗಿ ಒಂದು ಪಕ್ಷಕ್ಕೆ ಅಧೋಗತಿ ಯಾಗಬಹುದು.

[MR. DEPUTY SPEAKER in the Chair.]

ಈ ವಿಧೇಯಕವನ್ನನುಸರಿಸಿ ಒಂದು ಸಣ್ಣ ವಿವರ್ಶೆಯನ್ನು ನಾನು ಮಾಡಬೇಕೆಂದು ಬಯಸುತ್ತೇನೆ. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇದರಲ್ಲಿ ಮೂಲ ಹಿಡುವಳಿಯ ವಿಚಾರ ಹೇಳಿದೆ. 20 ಎಕರೆಯ. ವರೆಗೆ ಒಕ್ಕಲಿನಿಂದ ಬಿಡಿಸಬಹುದು ಎಂದು ಹೇಳುತ್ತಾರೆ. ಎಲ್ಲರಿಗೂ ಒಂದು ಕುಟುಂಬ ಹಿಡುವಳಿಯಷ್ಟು ಭೂಮಿಯನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಷ್ಟೋ ಜನರು ಮೂಲ ಹಿಡುವಳಿಯಷ್ಟು ಜಮೀನನ್ನು ಹೊಂದಲು ಸಾಧ್ಯವಾಗುವುದಿಲ್ಲ. 3,600 ಆದಾಯವುಳ್ಳವನಿಗೆ, ಮನೆಯಲ್ಲ ಐದಾರು ಜನರಿದ್ದಾರೆ ಅವರ ಊಟ, ಬಟ್ಟೆ, ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ಸೌಕರ್ಯ ಇವೆಲ್ಲವನ್ನೂ ಒದಗಿಸಲು ಸಾಧ್ಯವಾಗಲಾರದೆಂದು ತಮ್ಮ ತಮ್ಮ ತತ್ವಗಳನ್ನು ಹೇಳಿದರು. ಆದರೆ ಇವರಿಗಿಂತ ಕೆಳಮಟ್ಟದಲ್ಲಿರುವಂಥ ಜನರ ವಿಚಾರವಾಗಿ ಏನನ್ನೂ ಹೇಳಲಿಲ್ಲ. ವರ್ಷಕ್ಕೆ ಕೇವಲ 150 ರೂಪಾಯಿ 100 ರೂಪಾಯಿ ಹೀಗೆ ಉತ್ಪನ್ನ ಬರುವಂಥ ಜನರ ವಿಚಾರದಲ್ಲಿ ಕನಿಕರವನ್ನು ತೋರಿಸಬೇಕು ಎಂದು ಇಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಸೀಲಿಂಗ್ ಕಡಮೆ ಮಾಡಬೇಕೆಂಬುದು ಮಾನ್ಯ ಸದಸ್ಯರ ಅಭಿಪ್ರಾಯ ವೇ?

ಶ್ರೀ ಎಸ್. ನಂಜ್ಯನಾಯಕ್.—ಹೌದು. ಸೀಲಿಂಗ್ ಕಡಮೆ ಆಗಬೇಕೆಂದು ಹೇಳಬಹುದು. ಹಾಗೆ ಮಾಡಿದರೂ ಸಹ ಪರಿಹಾರ ದೊರೆಯುತ್ತದೆಂದು ಹೇಳಲಾರೆ. ನಿರ್ಗತಿಕರಾಗಿ ಉಳುವವರಲ್ಲಿ ವಿದ್ಯಾ ಬುದ್ಧಿ ಮತ್ತು ಹಣವಿಲ್ಲದೆ ಇರುವುದರಿಂದ ಅವರಿಗೆ ಎಷ್ಟು ಪ್ರಯೋಜನ ದೊರೆಯುತ್ತದೆ ಎಂಬುದನ್ನು ಹೇಳಲಾರೆ. ಅವರು ವಿದ್ಯಾವಂತರಾಗಲು ಸೌಕರ್ಯಗಳನ್ನೊದಗಿಸಬೇಕು. ವಿದ್ಯಾಭ್ಯಾಸವಿಲ್ಲದೆ

(ಶ್ರೀ ಎಸ್. ಸುಬ್ಬಯ್ಯನಾಯಕ್)

ದೇಹಶ್ರಮ ಪಡುವವನಿಗೆ ಎಷ್ಟು ಮನ್ನಣೆ ಕೊಡುತ್ತಿದ್ದೇವೆಂಬುದು ಎಲ್ಲರಿಗೂ ಗೊತ್ತು. ಮಾನ್ಯ ಸಚಿವರು ಅವರ ಭಾಷಣದಲ್ಲಿ "Very few owner-cultivators will be affected by the provisions of this bill" ಎಂದು ಹೇಳಿದ್ದಾರೆ. ಸ್ವಂತ ಬೇಸಾಯ ಮಾಡುತ್ತೇನೆ ಎನ್ನುವ ನೆವದಿಂದ ಭೂಮಿಯನ್ನು ಉಳಿಸಿಕೊಂಡಿರಬಹುದು. ಸ್ವಂತ ಬೇಸಾಯ ಮಾಡುವುದೆಂದರೆ ಏನು ಎಂಬುದಕ್ಕೆ ವಿವರಣೆ ಕೊಟ್ಟಿದ್ದಾರೆ. ಈ ವಿವರಣೆ ಪ್ರಕಾರ ಎಲ್ಲ ಭೂಮಿಯೂ ಸ್ವಂತ ಬೇಸಾಯಕ್ಕೆ ಬರುತ್ತದೆ. ಸ್ವಂತ ಬೇಸಾಯ ಮಾಡುವುದಕ್ಕೆ ಎಷ್ಟು ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. "A family of five persons will be allowed to have 180 acres of dry land." ಎಂದು ಹೇಳಿದ್ದಾರೆ. ಇದರ ಪ್ರಕಾರ 180 ಎಕರೆ ಒಣ ಭೂಮಿಯನ್ನು ಐದು ಜನರಿರುವ ಒಂದು ಸಂಸಾರದವರು ಇಟ್ಟುಕೊಳ್ಳಬಹುದು ನನ್ನ ಅನುಭವದ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಬರೀ ಐದು ಎಕರೆ ಒಣ ಭೂಮಿಯನ್ನು ಐದು ಮಂದಿ ಇರುವಂಥ ಒಂದು ಕುಟುಂಬಕ್ಕೆ ಕೊಟ್ಟು ಅದಕ್ಕೆ ಎಲ್ಲ ನವಲತ್ತು ಸಾಹಿತ್ಯ, ಸಾಮಗ್ರಿಗಳನ್ನು ಒದಗಿಸಿ ಕೊಟ್ಟರೆ ಅವನು ತನ್ನ ಜೀವನ ನಿರ್ವಹಿಸಬಲ್ಲ. ದೊಡ್ಡ ಕುಟುಂಬದವರು 360 ಎಕರೆಯವರೆಗೂ ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. ಹಾಗಾದರೆ ಮಿಕ್ಕವರಿಗೇನು ಉಳಿಯುವುದು ?

*ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮಂತ್ರಿಗಳು).—ನಾನು ಉದಾಹರಣೆಯ ರೂಪದಲ್ಲಿ ಹೇಳಿದ್ದೇನೆ. ಅದನ್ನೇ ಖಾಯಂ ಎಂದು ತಿಳಿಯಬಾರದು ಎಂದು ಹೇಳಿದ್ದೇನೆ. 3,600 ರೂಪಾಯಿ ವರಮಾನ ವಿರಬೇಕು ಎಂಬುದನ್ನು ಒಪ್ಪುವುದಾದರೆ ಅಷ್ಟಕ್ಕೆ ಐದು ಎಕರೆ ಬರಬಹುದು, ಐದುನೂರು ಎಕರೆ ಬರಬಹುದು.

ಶ್ರೀ ಎಸ್. ಸುಬ್ಬಯ್ಯನಾಯಕ್.—ಅಂಥ ಒಂದು ದುರುದ್ದೇಶದಿಂದ ಹೇಳಿದ್ದಾರೆಂದು ನಾನು ಖಂಡಿತವಾಗಿ ಹೇಳಲಿಲ್ಲ. ಆದರೆ ಹಾಗೆ ಮಾಡಲಕ್ಕೆ ಕಾನೂನಿದೆ, ಹಾಗೆ ಮಾಡುತ್ತಾರೆಂದು ನಾನು ಊಹಿಸಿ ಹೇಳುತ್ತಿದ್ದೇನೆ.

ಇನ್ನು wet lands ಎಷ್ಟು ಇಟ್ಟುಕೊಳ್ಳಬಹುದು, ಎನ್ನುವುದು ಕೂಡ ಬರುತ್ತದೆ. ಈ ರೀತಿ ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಎಕರೆ wet land first class ಗದ್ದೆ ಕೊಟ್ಟರೆ ಸಾಕು, ಐದು ಜನರ ಒಂದು ಕುಟುಂಬ ಸುಖವಾಗಿ ಜೀವನ ಮಾಡುತ್ತಾರೆಂದು ಹೇಳುತ್ತೇನೆ. ಬಾಗಾಯಿತು ಜಮೀನಾದರೆ ಎರಡು ಎಕರೆ ಕೊಟ್ಟರೆ ಜೀವನ ನಿರ್ವಹಿಸಲಕ್ಕೆ ಸಾಧ್ಯವಿದೆ.

ಡಾ॥ ಆರ್. ನಾಗನಗೌಡ (ಹೊನಪೇಟೆ).—ನಿಮ್ಮ ಜಿಲ್ಲೆಯಲ್ಲಿ ಎಷ್ಟು ಅಂಗುಲ ಮಳೆಯಾಗುತ್ತದೆ ?

ಶ್ರೀ ಎಸ್. ಸುಬ್ಬಯ್ಯನಾಯಕ್.—ಮಳೆ ಬರುವುದು ಕೇವಲ ಬಡವರಿಗೆ ಮಾತ್ರವಲ್ಲ. ಎಲ್ಲರಿಗೂ ಬರುತ್ತದೆ. ಮಳೆ ಜಾಸ್ತಿ ಬಂದರೆ ಎಷ್ಟೊಂದು ಅನಾಹುತಗಳಾಗುತ್ತವೆನ್ನುವುದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಈ ಸರಿ ಓದಿ ತಿಳಿದಿರಬಹುದು. ನಮ್ಮ ಕಡೆ ಪ್ರತಿವರ್ಷವೂ ಮಳೆಯ ಅನಾಹುತವಿದೆ. ತಮಗೆ ಮಾತ್ರ ಈ ವರ್ಷ ವಿಶೇಷವಾಗಿ ಕಂಡಿರಬಹುದು.

ಈ ವಿಧೇಯಕದಲ್ಲಿ wet lands 1/4 ಭಾಗ ಗೇಣಿ, dry lands 1/5 ಭಾಗ ಗೇಣಿ ಎಂದು ಹೇಳಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಆದರೆ ಬಾಗಾಯಿತು ಜಮೀನಿಗೆ ಎಂದರೆ ತೆಂಗು, ಅಡಿಕೆ ಇತ್ಯಾದಿಗಳಿಗೆ ಗೇಣಿ ಹೇಗೆ ಕೊಡಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ರೈತನು ತಾನೇ ಭೂಮಿಯನ್ನು ಹನನುಗೊಳಿಸಿ, ನಸಿಹಾಕಿ, ನೀರಾವರಿಯನ್ನು ಒದಗಿಸಿಕೊಂಡು, ತೋಟ ಮಾಡಿದರೆ ತೋಟಗಳಿಗೆ 1/5 ಭಾಗ ಗೇಣಿ ಎಂದು ಸೂಚಿಸಬೇಕು. ಭೂ ಮಾಲೀಕರೇ ನಸಿಹಾಕಿಸಿ, ನೀರಾವರಿ ಒದಗಿಸಿ ಕೊಟ್ಟರೆ 1/4 ಭಾಗ ಗೇಣಿ ಎಂದು ಸೂಚಿಸಬೇಕು ಎಂದು ಹೇಳಲಕ್ಕೆ ಇಷ್ಟಪಡುತ್ತೇನೆ.

ಐದುವರ್ಷಗಳವರೆಗೆ ನಮ್ಮ ಜಿಲ್ಲೆಯಲ್ಲಿ ಎಲ್ಲಿಯೂ ಒಕ್ಕಲುಗಳನ್ನು ಬಿಡಿಸದಹಾಗೆ ಮಾಡಿ ಒಂದು ಸರ್ವೆ ನಡೆಸಿ, ಈ ಮಸೂದೆಯನ್ನು ತರುವುದರಿಂದ ಎಷ್ಟು ಮಂದಿಗೆ ತೊಂದರೆಯಾಗುತ್ತದೆ, ಎಷ್ಟುಮಂದಿಗೆ ಅನುಕೂಲವಾಗುತ್ತದೆಂಬುದನ್ನು ತಿಳಿಯಬೇಕು. ಒಮ್ಮಿಂದ ಒಮ್ಮೆಗೇ ಕಾನೂನು ಮಾಡಿದರೆ ಎಷ್ಟೋ ಮಂದಿಗೆ ತೊಂದರೆಯಾಗುತ್ತದೆಯೇ ಹೊರತು ಅನುಕೂಲವಾಗುತ್ತದೆಂದು ಕಾಣುವುದಿಲ್ಲ.

12-15 P.M.

ಅಳಿಯಸಂತಾನ ವಿಧಾನದಲ್ಲಿ ವರ್ಗದಾರರಿಗೆ ಮಾತ್ರವಲ್ಲ, ಭೂ ರಹಿತರಿಗೆ ಸಹ ಬಾಧಕವಿದೆ ಎಂದು ನಾನು ಹೇಳುತ್ತೇನೆ. ಅಳಿಯ ಸಂತಾನದ ವಿಷಯದಲ್ಲಾದರೆ, ಒಂಬತ್ತು ಫ್ಯಾಮಿಲಿ ಹೋಲ್ಡಿಂಗುಗಳ ಪರಿಮಿತಿ ಇರಬೇಕೆಂದು ಈ ಮಸೂದೆಯಲ್ಲಿದೆ. ಬೇಸಿಕ್ ಹೋಲ್ಡಿಂಗ್ ಎಂದರೆ 400 ರೂಪಾಯಿ ವರಮಾನವನ್ನು ತರುವ ಜಮೀನಿನ ವಿಸ್ತೀರ್ಣವೆಂದು ಉಲ್ಲೇಖಿಸಿದ್ದೀರಿ ; ಮತ್ತು ಒಂದು ಕುಟುಂಬ ಹಿಡುವಳಿಯು ಬೇಸಿಕ್ ಹೋಲ್ಡಿಂಗಿನ ಮೂರರಷ್ಟು ಎಂದು ಹೇಳಿದೆ. ಆದರೆ ಒಂದು ಕುಟುಂಬ ಹಿಡುವಳಿಯು, ಮೂಲಹಿಡುವಳಿಯ ಎರಡು ಪಟ್ಟು ಇದ್ದರೆ ಸಾಕು. ದೊಡ್ಡ ಕುಟುಂಬಗಳಿಗೆ ಗೊತ್ತು ಮಾಡಿರುವ ಜಮೀನಿನ ಅತ್ಯಧಿಕ ವಿಸ್ತೀರ್ಣ ಆರು ಕುಟುಂಬ ಹಿಡುವಳಿ ಎಂದು ಇಟ್ಟಿರುವುದನ್ನು ನಾಲ್ಕಕ್ಕೆ ಇಟ್ಟರೆ ಸಾಕು. ಅಳಿಯ ಸಂತಾನದ ಕುಟುಂಬಗಳಿಗೆ ಒಂಭತ್ತು ಪಟ್ಟು ಎಂದು ವಿಧಾಯಕಮಾಡಿರುವುದನ್ನು, ಆರು ಪಟ್ಟು ಇಟ್ಟರೆ ಸಾಕು. ಇದು ನನ್ನ ನಿರ್ದಿಷ್ಟ ಅಭಿಪ್ರಾಯ.

ಧರ್ಮ ಸಂಸ್ಥೆಗಳಿಗೆ ಸೇರಿದ ಜಮೀನಿನ ವಿಚಾರದಲ್ಲಿ ಒಂದು ಮಾತು. ಆ ಜಮೀನುಗಳನ್ನು ಒಕ್ಕಲುಗಳು ಬೇಸಾಯ ಮಾಡುತ್ತಿದ್ದರೆ, ಧರ್ಮಸಂಸ್ಥೆಗಳಿಗೆ ಗೇಣಿ ಸಲ್ಲುತ್ತಿರುತ್ತದೆ. ಆ ಜಮೀನುಗಳನ್ನು ಸರ್ಕಾರ ವಹಿಸಿಕೊಳ್ಳುವ ಅಗತ್ಯವಿಲ್ಲ. ಧರ್ಮ ಸಂಸ್ಥೆಗೆ ಹೋಗಬೇಕು. ಭೂಮಿ ಒಕ್ಕಲಿನ ಹತ್ತಿರವೇ ಇರಲಿ.

ಎರಡನೆಯ ಪ್ರಕರಣದ 28ರಲ್ಲಿ "ರಕ್ಷಿಸಲ್ಪಟ್ಟ ಗೇಣಿದಾರ" ಎಂದರೆ, ಅವನು 12ವರ್ಷ ಭೂಮಿಯ ಅನುಭವದಾರನಾಗಿರಬೇಕು. ಅದರ ಬದಲು, ಆರು ವರ್ಷ ಎಂದಿದ್ದರೆ ಸಾಕು.

ಟ್ರಿಬ್ಯೂನಲ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕೆಲವು ಮಾನ್ಯ ಸದಸ್ಯರು ಈ ಟ್ರಿಬ್ಯೂನಲ್ಲಿನ ಕರ್ತವ್ಯಗಳನ್ನು ಸಿವಿಲ್ ಕೋರ್ಟಿಗೆ ವಹಿಸಬೇಕೆಂದು ಇಲ್ಲಿ ಪ್ರಸ್ತಾಪಿಸಿದ್ದಾರೆ. ಟ್ರಿಬ್ಯೂನಲ್

*Asterisk indicates that the remarks or speeches have not been revised by the member concerned.

ಗಳು ಸಿವಿಲ್ ಕೋರ್ಟುಗಳ ವ್ಯಾಪ್ತಿಗೆ ಒಳಗಾಗುವುದಾದರೆ, ಒಕ್ಕಲುಗಳಿಗೆ ಸರ್ಕಾರ ವಕೀಲರನ್ನು ಒದಗಿಸಿಕೊಡಬೇಕು. ಒಬ್ಬ ಮನುಷ್ಯ ಬಾಯಂಗೇಣಿದಾರ ಎನ್ನುವುದನ್ನು ಈ ಟ್ರಿಬ್ಯೂನಲ್ ಮುಂದೆ ರುಜುವಾತು ಮಾಡಬೇಕೆಂದು ಹೇಳಿದ್ದೀರಿ. ಈ ಸಂಬಂಧದಲ್ಲಿ ಎಷ್ಟೋಗೇಣಿದಾರರು ಅನಕ್ಷರಸ್ಥರಾಗಿರುತ್ತಾರೆಂಬುದನ್ನು ಗಣನೆಗೆ ತೆಗೆದುಕೊಂಡು, ಅವರ ಹಕ್ಕಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು.

53ನೆಯ ಪ್ರಕರಣದಲ್ಲಿ ಹೇಳಿರುವುದಕ್ಕೂ 65ರಲ್ಲಿ ಹೇಳಿರುವುದಕ್ಕೂ ಕೊಂಚ ವ್ಯತ್ಯಾಸವಿದೆ. 65ನೆಯ ಪ್ರಕರಣದಲ್ಲಿ ಹೇಳಿರುವುದನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಯಾರು ಒಕ್ಕಲು ಮಾಡದೆ, ಸೋಮಾರಿಗಳಾಗಿ ತಿರುಗಾಡಿಕೊಂಡಿರುತ್ತಾರೋ, ಅವರನ್ನು ಒಕ್ಕಲುತನದಿಂದ ಎಬ್ಬಿಸಬೇಕೆಂದು ವಿಧಾಯಕಮಾಡಿರುವುದನ್ನು ನಾನು ಬಲವಾಗಿ ಸಮರ್ಥಿಸುತ್ತೇನೆ.

ಮೂಲ ಹಿಡುವಳಿಗಿಂತ ಕಡಮೆ ಇದ್ದರೆ ಕಾಂಪೆನ್ಸೇಶನ್ನನ್ನು ಒಂದೇ ಕಂತಿನಲ್ಲಿ ಕೊಡಬೇಕೆಂದು ಹೇಳಿದೆ. ಇದು ಖಂಡಿತವಾಗಿಯೂ ಯಾವ ಗೇಣಿದಾರನಿಗೂ ಆಗುವುದಿಲ್ಲ. ಈ ಪೊಬಲಗನ್ನು 20 ಕಂತುಗಳಲ್ಲಿ ಕೊಡುವ ಹಾಗೆ ಮಾಡಬೇಕು. ಹೀಗಾಗದಿದ್ದರೆ, ಹತ್ತು ಕಂತುಗಳಷ್ಟನ್ನು ಒಂದು ಮೊತ್ತದಲ್ಲಿ ಕೊಟ್ಟು, ಏಳಕ್ಕ ಅರ್ಧ ಭಾಗವನ್ನು ಹತ್ತು ಕಂತುಗಳಲ್ಲಿ ಕೊಡುವಹಾಗೆ ಮಾಡಬೇಕು.

ಕಂತುಗಳ ಮೇಲೆ ಕೊಡುವ ಹಣಕ್ಕೆ ಶೇಕಡ 4½ ಬಡ್ಡಿ ಎಂದು ಹೇಳಿದೀರಿ. ಆಹಾರ ಉತ್ಪತ್ತಿ ಜಾಸ್ತಿ ಮಾಡಬೇಕೆಂದೂ ಹೇಳುತ್ತಿದ್ದೀರಿ. ರೈತನ ಮಟ್ಟಿಗೆ ಹೇಳುವುದಾದರೆ, ಬಡ್ಡಿದರವನ್ನು ಕೇವಲ 2½ಗೆ ಇಳಿಸಿ ವಸೂಲು ಮಾಡಬೇಕೆಂದು ಹೇಳುತ್ತೇನೆ. ಹೀಗೆ ಮಾಡದಿದ್ದರೆ, ಕೇವಲ ಒಂದು ಐದು ಸಾವಿರ ರೂಪಾಯಿಯ ಆಸ್ತಿಗೆ, ರೈತ ವರ್ಷಕ್ಕೆ 200-300 ರೂಪಾಯಿ ಬಡ್ಡಿಯನ್ನೇ ಕೊಡಬೇಕಾಗುತ್ತದೆ. ಆದ್ದರಿಂದ ಈ ಬಡ್ಡಿದರವನ್ನು ಕಟಮೆ ಮಾಡಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಕಾನೂನು ವಿರುದ್ಧವಾದ ವ್ಯವಹಾರಗಳನ್ನು ವರದಿಮಾಡಬೇಕೆಂದು 93ನೆ ಪ್ರಕರಣದಲ್ಲಿ ಹೇಳಿರುವುದು ಸಮಂಜಸವಾಗಿದೆ. ಇಲ್ಲಿ ಹೇಳಿರುವುದನ್ನು ಸರಿಯಾಗಿ ಪಾಲಿಸಬೇಕು ಮತ್ತು ಕಟ್ಟುನಿಟ್ಟಾಗಿ ನೆರವೇರಿಸಬೇಕು.

ಈ ವಿಧೇಯಕದ ಮೇಲೆ ಮಾತನಾಡಲು ನನಗೆ ಒಂಬಿಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಸ್ಪೀಕರ್ ರವರಿಗೆ ಅನಂತ ವಂದನೆಗಳನ್ನು ಅರ್ಪಿಸಿ, ಈ ಬಿಲ್ಲನ್ನು ಸಮರ್ಥಿಸುತ್ತೇನೆ.

[S. P. TALWALKAR (Raibag) spoke in Marathi].

Sri S. D. KOTHAVALE (Chikodi).—If the Hon'ble Member wants to be understood by the Hon'ble Revenue Minister I wish he talks either in English or Kannada, which he knows well. Not because anybody is not proud of any language, but it is better he talks in a language understood by the Revenue Minister.

[Sri S. P. Talwalkar.—continued his speech in Marathi].

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಅಧ್ಯಕ್ಷರೇ, ಹತ್ತು ದಿನಗಳಕಾಲ ಈ ಮಸೂದೆಯಮೇಲೆ ಚರ್ಚೆ ನಡೆದಿದೆ. ಈ ಚರ್ಚೆಯನ್ನು ನಾನು ಕೂಲಂಕಷವಾಗಿ ಗಮನಿಸಿದ್ದೇನೆ. ಮೊಟ್ಟಮೊದಲು ನಾನು ಭಾಷಣ ಮಾಡಿದಾಗ, ಈ ಮಸೂದೆಯನ್ನು ಸಂಪೂರ್ಣವಾಗಿ ಎಲ್ಲರಿಗೂ ತೃಪ್ತಿಯನ್ನುಂಟುಮಾಡುವ ಹಾಗೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೆ. ಈ ಸಭೆಯಲ್ಲಿ ನಡೆದ ಚರ್ಚೆಯನ್ನು ನೋಡಿದರೆ ನಾನು ಹೇಳಿದ್ದುದು ನಿಜವೆಂದೆನಿಸುತ್ತದೆ. ಕೆಲವು ಮುಖ್ಯಾಂಶಗಳಲ್ಲಿ ಅನೇಕ ಮಾನ್ಯ ಸದಸ್ಯರು ಒಂದೇ ವಿಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಮಿಕ್ಕವರಲ್ಲಿ ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಕೆಲವರು ಈ ಭೂಸುಧಾರಣೆ ಮಸೂದೆ ಒಳ್ಳೆಯದಲ್ಲವೆಂದು ಹೇಳಿದ್ದಾರೆ, ಭೂಸುಧಾರಣೆ ನೀತಿಗೆ ಧಕ್ಕೆ ಬರುವ ರೀತಿಯಲ್ಲಿದೆ ಎಂದು ಮಾತನಾಡಿದ್ದಾರೆ. ಕೆಲವರು ಈ ಮಸೂದೆಕ್ರಾಂತಿಕಾರಕವಾಗಿದೆ ಎಂದು ಹೇಳಿದ್ದಾರೆ. ಕೆಲವರು ಈ ಮಸೂದೆಯಿಂದ ಭೂಮಾಲೀಕನಿಗೂ ಪ್ರಯೋಜನವಿಲ್ಲ ಮತ್ತು ರೈತನಿಗೂ ಪ್ರಯೋಜನವಿಲ್ಲವೆಂದು ಹೇಳಿದ್ದಾರೆ. ಆದುದರಿಂದ ನಾವು ಇಷ್ಟು ದೀರ್ಘವಾಗಿ ಎಂಥ ಕ್ಲಿಷ್ಟವಾದ ಸಮಸ್ಯೆಯನ್ನು ಎದುರಿಸಲು ಹೊರಟಿದ್ದೇವೆ ಎನ್ನುವುದು ಈ ಸಭೆಯಲ್ಲಿ ನಡೆದ ಚರ್ಚೆಯಿಂದ ವ್ಯಕ್ತವಾಗುತ್ತದೆ. ಭೂ ಸುಧಾರಣೆಗೆ ನೈತಿಕವಾಗಿ ಕೊಡಲಿ ಪೆಟ್ಟನ್ನು ಕೊಡುವ ಸಾಹಸವನ್ನು ಮಾಡಿದ್ದಾರೆಂದು ಕೆಲವು ಮಾನ್ಯ ಮಹನೀಯರು ಹೇಳಿದ್ದಾರೆ. ನಮ್ಮ ದೇಶದಲ್ಲಿ ಶೇಕಡ ಎಪ್ಪತ್ತೈದರಷ್ಟು ಅಥವಾ ಎಂಬತ್ತರಷ್ಟು ಜನರು ಬಡವರು. ಈ ದೇಶದಲ್ಲಿ ಕೆಲವು ರಾಜಕೀಯ ಪಕ್ಷಗಳ ಏನಾ ಉಳಿದೆಲ್ಲ ಪಕ್ಷಗಳೂ ಡೆಮೊಕ್ರಾಟಿವ್ ಸೋಷಿಯಲಿಸಮ್ಮಿನ ತತ್ವವನ್ನು ಒಪ್ಪಿಕೊಂಡಿವೆ. ಈ ತತ್ವವನ್ನು ಒಪ್ಪಿಕೊಂಡ ಮೇಲೆ ನಾವು ಮುಂದೆ ಜನಕ್ಕೆ ಸಮಾಧಾನ ಉಂಟುಮಾಡುವಂತೆ ಮಾಡುವುದು ನಮ್ಮ ಕರ್ತವ್ಯ. ಬಡವರಿಗೆ ನಿರಾಶೆ ಬರುವಂತೆ ಮತ್ತು ಹಿಂದೇನೂ ಮಾಡದೇ ಇರತಕ್ಕ ರೀತಿಯಲ್ಲಿ ನಾವು ವರ್ತಿಸಬಾರದು. ಬಡವರ ಒಂದು ತಾಳ್ಮೆಗೂ ಕೂಡ ಒಂದು ಎಲ್ಲೆ ಇದೆ ಎಂಬುದನ್ನು ನಾವು ತಿಳಿದುಕೊಳ್ಳುವುದು ಅಗತ್ಯ. ಕೆಲವರು ಕಡಿದಾಳ್ ಮಂಜಪ್ಪನವರು ಸಮತಾವಾದ ಸಮಾಜದ ಭಾವನೆಯುಳ್ಳವರು, ಆದರೆ ಈ ಮಸೂದೆಯನ್ನು ನೋಡಿದರೆ ನಿರಾಶೆಯಾಗುತ್ತದೆ ಎಂದು ಹೇಳಿದ್ದಾರೆ. ಇದು ಕಡಿದಾಳ್ ಮಂಜಪ್ಪನವರ ವೈಯಕ್ತಿಕ ಅಭಿಪ್ರಾಯವನ್ನು ಒಳಗೊಂಡ ಮಸೂದೆಯಲ್ಲವೆಂದು ನಾನು ತಿಳಿಸಬಯಸುತ್ತೇನೆ. ಈ ಸಭೆಯಲ್ಲಿ ಇಪ್ಪತ್ತೊಂದು ಭಿನ್ನಾಭಿಪ್ರಾಯ ಉಂಟಾದರೆ ಮಂತ್ರಿಗಳಾದವರು ಯಾರೇ ಆದರೂ ಯಾವ ವರ್ಗಕ್ಕಾದರೂ ತಪ್ಪಿ ಉಂಟಾಗುವ ರೀತಿಯಲ್ಲಿ ಮಸೂದೆಯನ್ನು ರಚಿಸುವುದು ಕಷ್ಟವಾಗುತ್ತದೆ.

[MR. SPEAKER in the Chair]

ಶ್ರೀ ಎಂ. ರಾಮಪ್ಪ (ಹರಿಹರ).—ವೈಯಕ್ತಿಕ ಅಭಿಪ್ರಾಯ ಇನ್ನೂ ಮುಂದೆ ಹೋಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ — ಡೆಮೊಕ್ರಟಿಕ್ ಸೋಷಲಿಜಮ್ ತತ್ವವನ್ನು ಒಪ್ಪಿಕೊಳ್ಳುವುದಾದರೆ, ಈ ದೇಶದಲ್ಲಿ ಬಹಳ ಜನರಿಗೆ ನಿರಾಶೆ ಉಂಟಾಗುವವರೆಗೆ ನಾವು ಕಾಲಹರಣ ಮಾಡುವುದು ಸೂಕ್ತವಲ್ಲ ಎಂದು ಹೇಳಿ ಈ ಸಭೆಯಲ್ಲಿ ಮಾನ್ಯ ಶಾಸನ ಸಭಾ ಸದಸ್ಯರಿಗೂ ತಮ್ಮ ಮೂಲಕ ರಾಜ್ಯದ ಸಾರ್ವಜನಿಕರಿಗೂ ಕೂಡ ವಿನಂತಿಮಾಡಿಕೊಳ್ಳುತ್ತೇನೆ. ಜನರಲ್ಲಿ ತೃಪ್ತಿ ಇರಬೇಕಾದುದು ಅಗತ್ಯ. ಬಹುಜನರಿಗೆ ತೃಪ್ತಿಯನ್ನು ಒದಗಿಸತಕ್ಕದ್ದು ನಮ್ಮಗಳ ಕರ್ತವ್ಯ.

(ಶ್ರೀ ಕಡಿದಾಳ್ ಮಂಜಪ್ಪ)

ಆ ರೀತಿ ಕೆಲಸ ಮಾಡಬೇಕೆಂದು ನಾವು ಹೊರಟಿದ್ದೇವೆ. ಆ ನಮ್ಮ ಕೆಲಸ ಅಥವಾ ನಮ್ಮ ಪ್ರಯತ್ನ ಸಫಲವಾಗಲಿ ಎಂದು ಹಾರೈಸಿ ಮುಂದಕ್ಕೆ ಹೊರಡುತ್ತೇನೆ.

ಅಧ್ಯಕ್ಷರು.—ಒಂದು ಮಾತು. ಹೇಗಾದರೂ ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ. ಆದ್ದರಿಂದ ಹೆಚ್ಚು ಹೇಳುವುದು ಅನಾವಶ್ಯಕವೆಂದು ಕಾಣುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ನಿಜ. ತಾವು ಬೆಳಿಗ್ಗೆ ಪಾರ್ಲಮೆಂಟಿನಲ್ಲಿ ಎಲ್ಲಾ ಮಂತ್ರಿಗಳು 30 ಅಥವಾ 40 ನಿಮಿಷಕ್ಕಿಂತ ಹೆಚ್ಚುಕಾಲ ಮಾತನಾಡುವುದಿಲ್ಲ ಎಂದು ಹೇಳಿದಿರಿ ನಾನು ಅದಕ್ಕಿಂತ ಕಡಮೆ ಸಮಯದಲ್ಲಿ ಮುಗಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಗಂಟೆ ಒಂದು ಬಾರಿಸುತ್ತಿದೆ, ಹೊಟ್ಟೆಯಲ್ಲೂ ಗಂಟೆಗಳು ಬಾರಿಸುತ್ತಿವೆ ಅದಕ್ಕೊಸ್ಕರವಾಗಿ ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದೆರಡು ಮೂಲ ಅಂಶಗಳನ್ನು ಮಾತ್ರ ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ವಾದಿಸಿದ್ದಾರೆ, ಸೋಷಲಿಜಮ್ ಎಂದರೆ ಸಮತಾವಾದದ ಪ್ರವಾಹವನ್ನು ಬರೀ ಹಳ್ಳಿಗಳ ಕಡೆಗೇ ಕೊಂಡೊಯ್ಯುತ್ತಿದ್ದೀರಿ! ಅವುಗಳ ಪ್ರಯೋಜನ ಪಟ್ಟಣಗಳ ಕಡೆಗೂ ಇರಬೇಕು ಎಂದು. ಅದು ನ್ಯಾಯವಾದದ್ದು. ತಪ್ಪು ಎಂದು ಹೇಳುವುದಿಲ್ಲ. ನಮ್ಮ ದೇಶದ ಬಹುಸಂಖ್ಯೆಯ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ, ಭೂಮಿಯ ಮೇಲೆ ವ್ಯವಸಾಯದ ಮೇಲೆ ಅವಲಂಬಿಸಿರುತ್ತಾರೆ. ನಮ್ಮ ಪ್ರಧಾನಿಗಳು ಅನೇಕ ಸಂದರ್ಭಗಳಲ್ಲಿ ಅಪ್ಪಣೆ ಕೊಡಿಸಿದಹಾಗೆ, ನಾವು ವರಮಾನಕ್ಕೆ ಒಂದು ಮಿತಿಯನ್ನು ಗೊತ್ತುಮಾಡುತ್ತಾ ಇಲ್ಲ. ಈ ದೇಶದಲ್ಲಿ ಭೂಮಿಯಮೇಲೆ ಒತ್ತಡ ಜಾಸ್ತಿ ಇದೆ. ಈ ದೇಶದಲ್ಲಿ ಸಾಗುವಳಿಗೆ ಯೋಗ್ಯವಾದ ಎಲ್ಲಾ ಭೂಮಿಯನ್ನು ಹಂಚಿದರೂಕೂಡ ವ್ಯವಸಾಯದಲ್ಲಿ ನೇರವಾಗಿ ಪ್ರತಿಯೊಬ್ಬರಿಗೂ $1\frac{1}{4}$ ಎಕರೆ ಬರುವುದಿಲ್ಲ. ಅದರಿಂದ ಭೂಮಿಯಮೇಲೆ ಎಷ್ಟು ಒತ್ತಡ ಇದೆಯೆಂಬುದು ಗೊತ್ತಾಗುತ್ತದೆ. ಕೆಲವು ಭಾಗದಲ್ಲಿ ಪದೇ ಪದೇ ಕ್ಷಾಮ ತಲೆದೋರುವುದರಿಂದ, 1/3 ಭಾಗ, $\frac{1}{4}$ ಭಾಗ ದಷ್ಟು ಪ್ರದೇಶದಲ್ಲಿ ಸಕಾಲದಲ್ಲಿ ಮಳೆ ಆಗದೆ ಅಥವಾ ವಿಪರೀತ ಮಳೆ ಆಗಿ ಸಾಕಾದಷ್ಟು ಪ್ರಮಾಣದಲ್ಲಿ ಬೆಳೆ ಆಗುತ್ತಾ ಇಲ್ಲ. ಅದರಿಂದ ಒತ್ತಡ ಜಾಸ್ತಿಯಾಗಿದೆ. ಒಬ್ಬ ಮನುಷ್ಯ ಎಷ್ಟು ಭೂಮಿಯನ್ನು ಹೊಂದಬೇಕು ಎಂಬುದನ್ನು ನಿಗದಿಮಾಡದ ಹೊರತು ಆದಾಯಕ್ಕೆ ಪರಿಮಿತಿಯನ್ನು ಹಾಕುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ದೇಶದಲ್ಲಿ ಯಾರಿಗೂ ಕೂಡ ತಿಂಗಳಿಗೆ 1,200 ರೂಪಾಯಿಗಳು ಅಥವಾ 1,500 ರೂಪಾಯಿಗಳಿಗಿಂತ ಹೆಚ್ಚು ನಿವ್ವಳ ವರಮಾನ ಬೇಕಾಗಿಲ್ಲ.

ಶ್ರೀ ವಿ. ಶ್ರೀನಿವಾಸಶೆಟ್ಟಿ (ಕುಂದಾಪುರ).—ಒಬ್ಬೊಬ್ಬರಿಗೇ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಬಡತನದ ರಾಜ್ಯ. ನಾವು ಪಟ್ಟಣದಲ್ಲಿ ಸಮತಾವಾದ ತತ್ವವನ್ನು ಜಾರಿಗೆ ತರುತ್ತಿದ್ದೇವೆ. ಇನ್‌ಕಂಟಾಕ್ಸ್, ಸೂಪರ್ ಟಾಕ್ಸ್, ವೆಲ್ತ್‌ಟಾಕ್ಸ್, ಎಕ್ಸ್‌ಪೆಂಡಿಚರ್ ಟ್ಯಾಕ್ಸ್ ಮುಂತಾದ ತೆರಿಗೆಗಳಿಂದ ಪಟ್ಟಣಗಳಲ್ಲಿ ಕೂಡ ಕಾಲಕ್ರಮೇಣ ಸಮತಾವಾದ ಸಮಾಜ ಜಾರಿಗೆ ಬರುತ್ತದೆ ಎಂದು ನಾನು ಆಶಿಸುತ್ತೇನೆ. ಯಾರೋ ಕೆಲವರು ಅಲ್ಲಲ್ಲಿ ಇನ್‌ಕಂಟಾಕ್ಸ್ ಕೊಡದೆ ಅಕ್ರಮವಾಗಿ ಸಂಪಾದನೆ ಮಾಡಿರುವವರು ನಮ್ಮ ಕಣ್ಣಿಗೆ ಕಾಣುತ್ತಾ ಇರಬಹುದು. ಅವರ ಸಂಖ್ಯೆ ಕೇವಲ ಕಡಿಮೆ. ಆದ್ದರಿಂದ ಪಟ್ಟಣಗಳಲ್ಲಿ ವರಮಾನದ ನಿಗದಿ ಬರುವವರೆಗೆ ಭೂಸುಧಾರಣೆ ಬರಬಾರದು ಎನ್ನುವ ತತ್ವವನ್ನು ಒಪ್ಪುವುದಕ್ಕಾಗುವುದಿಲ್ಲ. ಎಲ್ಲಾ ಪಕ್ಷದವರೂ ಕೂಡ ಉಳುವವನೇ ಭೂಮಿಯ ಒಡೆಯನಾಗಬೇಕು ಎಂದು ಸಾರುತ್ತಾ ಬಂದಿದ್ದಾರೆ. ಜನತೆಗೆ ಕೊಟ್ಟ ವಚನವನ್ನು ಪರಿಪಾಲನುವುದು ನಮ್ಮೆಲ್ಲರ ಕರ್ತವ್ಯ. ಇನ್ನು ಬೇರೆ ಉದ್ಯಮಗಳಲ್ಲಿ ಈ ಸಮಾಜವಾದ ಜಾರಿಗೆ ಬರುವ ಕ್ರಮವನ್ನು ನಾವು ಜಾಗ್ರತೆ ಕೈಗೊಳ್ಳಬೇಕು. ಈ ಮಸೂದೆಗೆ ಸಂಬಂಧಿಸಿದ ಕೆಲವು ವಿಚಾರಗಳಲ್ಲಿ ಮಾತ್ರ ಮಾತನಾಡುತ್ತೇನೆ. ಈ ಮಸೂದೆಯಮೇಲೆ ಎಷ್ಟು ಬೇಕಾದರೂ ಮಾತನಾಡಬಹುದು. ಆದರೆ ನಾನು ಅಧ್ಯಕ್ಷರಿಗೆ ಬೇಗ ಮುಗಿಸುತ್ತೇನೆಂದು ಭರವಸೆ ಕೊಟ್ಟಿದ್ದೇನೆ. ಅವರು ಇಷ್ಟಪಟ್ಟರೆ $1\frac{1}{2}$ ಗಂಟೆಯೊಳಗಾಗಿ ಮುಗಿಸುತ್ತೇನೆ.

ಒಬ್ಬ ಸದಸ್ಯರು.—$1\frac{1}{4}$ ಗಂಟೆಯೊಳಗೆ ಮುಗಿಸಿದರೆ ಸಾಕು.

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಮಿತ್ರರಾದ, ಎದುರು ಪಕ್ಷದ ನಾಯಕರಾದ ಶ್ರೀಮಾನ್ ಶ್ರೀನಿವಾಸಶೆಟ್ಟರು ಸೆಂಟ್ರಲ್ ಲ್ಯಾಂಡ್ ರಿಫಾರಮ್ಸ್ ಕಮಿಟಿ ನಲಹೆಗಳಲ್ಲಿ ಅಡಿಕೆ ಮತ್ತು ತೆಂಗು ಇವುಗಳಿಗೆ ವಿನಾಯಿತಿ ಕೊಡಬೇಕು ಎಂದು ನಮೂದು ಆಗಿಲ್ಲ, ಅವನ್ನು ಹೊಸದಾಗಿ ಇಲ್ಲಿ ಸೇರಿಸಿದ್ದಾರೆ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಹಿಂದೆ ಕೊಟ್ಟ ನೋಟ್ಸ್‌ನಲ್ಲಿ ಅದು ನಮೂದು ಆಗಿದೆ. ಆಗಲೇ ಸೆಂಟ್ರಲ್ ಲ್ಯಾಂಡ್ ರಿಫಾರಮ್ಸ್ ಕಮಿಟಿಯವರು ತೆಂಗು ಮತ್ತು ಅಡಿಕೆ ಮತ್ತು ಇತರ ಪ್ಲಾಂಟೇಷನ್ ಫಸಲಿನ ಜಮೀನುಗಳಿಗೆ ವಿನಾಯಿತಿ ಕೊಡಬೇಕು ಎಂದು ನಮೂದು ಮಾಡಿದ್ದಾರೆ. ಮಾನ್ಯ ಸ್ನೇಹಿತರು ಓದಿದರೆ ಗೊತ್ತಾಗುತ್ತದೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಅದು ಮೈನೂರಿಗೆ ಮಾತ್ರ ಅನ್ವಯಿಸುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಪ್ಲಾಂಟೇಷನ್‌ಗಳಿಗೆ ವಿನಾಯಿತಿ ಕೊಡಬೇಕೆ, ಒಂದುವೇಳೆ ಕೊಡುವುದಾದರೆ ಎಷ್ಟು ಕೊಡಬೇಕು ಎಂಬ ವಿಚಾರಗಳನ್ನು ಜಂಟೀ ಸಮಿತಿಯವರು ಪರ್ಯಾಲೋಚಿಸುತ್ತಾರೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಈಗಾಗಲೇ ಕೇರಳದಲ್ಲಿ ಬಿಲ್ ಪಾಸು ಮಾಡಿದ್ದಾರೆ. ಅಲ್ಲಿ ವಿನಾಯಿತಿ ಕೊಟ್ಟಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೇರಳದಲ್ಲಿ ವಿನಾಯಿತಿ ಕೊಡದೆ ಇರಬಹುದು. ಇನ್ನೂ ಕೆಲವರು ಹೇಳಿದರು, ಪ್ಲಾನಿಂಗ್ ಕಮಿಷನ್‌ನವರು ತಮ್ಮ ಅಭಿಪ್ರಾಯವನ್ನು ನಮ್ಮಮೇಲೆ ಹೊರಿಸುವುದಕ್ಕೆ ಯಾವ ಅಧಿಕಾರ ಇದೆ ಎಂದು. ಹಿಂದೂಸ್ಥಾನದಲ್ಲಿ ಯೋಜನೆಗಳನ್ನು ತಯಾರು ಮಾಡುವುದಕ್ಕೆ, ದೇಶದಲ್ಲಿ ಸಾಧನ ಸಂಪತ್ತುಗಳನ್ನು ಹೆಚ್ಚಿಸುವುದಕ್ಕೆ, ಈ ಸಂಸ್ಥೆಯನ್ನು ಏರ್ಪಡಿಸಿದ್ದಾರೆ. ಈ ಸಂಸ್ಥೆಯ ಅಭಿಪ್ರಾಯವನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಪಾರ್ಲಮೆಂಟ್ ಒಪ್ಪಿಕೊಂಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವೂ ಪರಿಶೀಲನೆ ಮಾಡೋಣ.

ಶ್ರೀ ಕಡಿದಾಳ್ ಮಂಜಪ್ಪ.—ನನ ಮಟ್ಟಿಗೆ ಹೇಳುವುದಾದರೆ ಪ್ಲಾನಿಂಗ್ ಕಮಿಷನ್ನಿನವರ ನಲಹೆಗೆ ಬೆಲೆ ಕೊಡುವುದು ಯೋಗ್ಯವಾಗಿದೆ. ಸೀಲಿಂಗ್ ಪರಿಮಿತಿ ಜಾಸ್ತಿಯಾಗಿದೆ ಎಂದು ಕೆಲವರೂ, ಕಡಮೆಯಾಗಿದೆ ಎಂದು ಕೆಲವರೂ ಹೇಳಿದ್ದಾರೆ. 3,600 ರೂಪಾಯಿ ನಿವ್ವಳ ವರಮಾನ ಬರುತಕ್ಕ ಭೂಮಿಯ ಪರಮಾವಧಿ ಹಿಡುವಳಿ ವಿಸ್ತೀರ್ಣ ಆಗಿರಬೇಕು ಎಂದು ಒಪ್ಪಿಕೊಳ್ಳುವುದಾದರೆ 400 ಎಕರೆ ಬರಬಹುದು, ಫಲವತ್ತಾದ

ಭೂಮಿ ಆದರೆ 10 ಎಕರೆ ಬರಬಹುದು ಎಂದು ಕೆಲವು ಅಂಕಿ ಅಂಶಗಳನ್ನು ನಭೆಯ ಮುಂದೆ ಇಟ್ಟಿದ್ದೇನೆ. ಇಷ್ಟೇ ಭೂಮಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದುವೇಳೆ ನಾನು ಹೇಳಿದ ರೀತಿ 1951ನೆಯ ಇನಪಿಯಲ್ಲಿ ಆಹಾರ ದವಸದ ಬೆಲೆ ನಾನು ಹೇಳಿದಷ್ಟೇ ಇದ್ದಿದ್ದರೆ, ಭೂಮಿಯ ಹಿತುವಳಿ ಅಷ್ಟೇ ಇದ ರೆ ಷಷ್ಟು ಬರಬಹುದು. ಆಮೇಲೆ ಈ ಮಸೂದೆ ಜಾರಿಗೆ ಬಂದರೆ ಗೇಣಿದಾರನಿಗೆ ಉಚ್ಚಾಟನೆ ಬಹುಮಟ್ಟಿಗೆ ನಡೆಯುತ್ತದೆ ಎಂದು ಹೇಳಿದ್ದಾರೆ. ಉಚ್ಚಾಟನೆ ಆಗದಹಾಗೆ ಸಾಕಾದಷ್ಟು ಸೇಫ್‌ಗಾರ್ಡ್ಸ್ ಹಾಕಿ ನನ್ನ ಅಭಿಪ್ರಾಯದಲ್ಲಿ ಮಾನ್ಯ ಸದಸ್ಯರು ತಿಳಿಪಡಿಸಿದಬಹುದು. ಒಂದುವೇಳೆ ಗೇಣಿದಾರ ಒಂದು ಎಕರೆ ತರಿ, ಎರಡು ಎಕರೆ ಖುಷ್ಕಿ ಸಾಗುಮಾಡುತ್ತಾನೆಂದು ಇಟ್ಟುಕೊಳ್ಳೋಣ. ಅಂಥ ಸಂದರ್ಭದಲ್ಲಿ ಭೂಮಿ ಗೇಣೀದಾರನಿಗೆ ಹೋಗಬೇಕೆಂದು ಮಾಡುವುದಕ್ಕೆ ಸಾಧ್ಯವಿದೆ. ಮಾಲೀಕನಿಗೆ ಜಮೀನು ಇರಲಿ, ಇಲ್ಲದೇ ಇರಲಿ ನಾಲ್ಕು ಎಕರೆ ತರಿ, ಎರಡು ಎಕರೆ ಖುಷ್ಕಿ ಇದ್ದರೆ ಆ ಭೂಮಿ ಗೇಣೀದಾರನಿಗೆ ಹೋಗಬೇಕು ಎಂದು ಹೇಳಿ ಮಾರ್ಪಾಡುಮಾಡುವುದಕ್ಕೆ ಅವಕಾಶವಿದೆ. ನಾನು ಅದನ್ನು ಒಪ್ಪುತ್ತೇನೆ. ಭೂಮಾಲೀಕನಿಗೆ ಏನಾದರೂ

1-15 P.M.

ಉದ್ಯೋಗ ಕಲ್ಪಿಸಿದ್ದೀರಾ ಮತ್ತು ಬಹಳ ಕಾಲದಿಂದ ಸಾಗುವಳಿ ಇಲ್ಲದೆ ಬೇರೆ ಉದ್ಯೋಗದಲ್ಲಿ ತೊಡಗಿದವರು ಆರು-ಏಳು ವರ್ಷಗಳಾದನಂತರ ಭೂಮಿಯ ವಿಚಾರಕ್ಕೆ ಏತಕ್ಕೆ ಕೈಹಾಕಬೇಕೆಂಬುದಾಗಿ ಅನೇಕ ಮಾನ್ಯ ಸದಸ್ಯರು ಹೇಳಿದರು. ನಾನು ಮೊದಲು ಹೇಳಿದಹಾಗೆ ಸಣ್ಣಪುಟ್ಟ ಹಿಡುವಳಿದಾರರು ಅವರ ಪೂರ್ತಿ ಜಮೀನುಗಳನ್ನು ಗೇಣಿಗೆ ಕೊಟ್ಟಿದ್ದು ಅವರಿಗೆ ಗೇಣಿಯಿಂದ ಬರತಕ್ಕ ವರಮಾನವೇ ಮುಖ್ಯವಾಗಿದ್ದರೆ, ಅಂತಹ ವಿಷಯದಲ್ಲಿ ನಾನೂ, ಸರ್ಕಾರದವರೂ, ತಾವೂ ಸಹಕರಿಸುವುದು ಅಗತ್ಯ. ಆದರೆ ಬೇರೆ ಉದ್ಯಮಗಳಲ್ಲಿ ತೊಡಗಿರುವವರು ಸಾವಿರಾರು ರೂಪಾಯಿಗಳನ್ನು ಸಂಪಾದನೆಮಾಡುವವರಾಗಿದ್ದರೆ, ಅಂತಹವರ ವಿಚಾರದಲ್ಲಿ ಸಹಕರಿಸುವ ಅವಶ್ಯಕತೆಯೇ ಇಲ್ಲ.

ಇನ್ನು ಶ್ರೀಮಾನ್ ಶ್ರೀನಿವಾಸಶೆಟ್ಟರು ಸ್ಕೂಲ್ ಮಾಸ್ಟರುಗಳಿಗೆ, ಸರ್ಕಾರಿ ನೌಕರರುಗಳಿಗೆ, ಆದಷ್ಟೂ ಪೊಸೆಸ್ಸಿನವರಿಗೆ ವಿನಾಯಿತಿ ಕೊಡಬೇಕೆಂದು ಹೇಳಿದರು. ಹಾಗೆ ಕೊಡುತ್ತಾ ಹೋದರೆ ಎಲ್ಲರಿಗೂ ವಿನಾಯಿತಿ ಕೊಡಬೇಕು. ಶ್ರೀ ಶ್ರೀನಿವಾಸಶೆಟ್ಟರು ಬಡವರು ಇರಬಾರದು, ನಾನು ಬಡವರಿರಬಹುದು, ಮಾನ್ಯ ಸದಸ್ಯರು ಅನೇಕರು ಬಡವರಿರಬಹುದು. ಆದರೆ ಕೇವಲ ಹಳ್ಳಿಗಳಿಗೆ ಈರೀತಿ ಸೀಲಿಂಗ್ ಹಾಕಿದರೆ ರೈತ ಬಹಳ ಕೆಟ್ಟುಹೋಗುತ್ತಾನೆ, ಕೆಲವು ಸಂದರ್ಭಗಳಲ್ಲಿ ಚುನಾವಣೆಯ ರಾಜಕೀಯದಲ್ಲಿ ಅವರ ಪ್ರಭಾವ ಜಾಸ್ತಿಯಾಗುತ್ತದೆಂದು ಶ್ರೀಮಾನ್ ಪುಟ್ಟಣ್ಣನವರು ಹೇಳಿದ್ದಾರೆ. ಇವತ್ತು ಬಡವರು—ಶ್ರೀಮಂತರು ಎಂಬ ಭೇದ ಭಾವವೇ ಇಲ್ಲ. ಶ್ರೀಮಂತರೂ ರಾಜಕೀಯದಲ್ಲಿ ಬರಬೇಕು. ಆದರೆ ರಾಜಕೀಯವನ್ನೇ ಇಟ್ಟುಕೊಂಡು ಹೆಚ್ಚಿನ ಧನಸಂಗ್ರಹಣೆ ಮಾಡುವುದಕ್ಕೆ ಉಪಯೋಗಿಸಬಹುದು ಎನ್ನುವ ಜನ ಬರಬಾರದು.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಶೇಕಡ 75ರಷ್ಟು ರೈತರೇ ಬಾರ್ಡರ್‌ದು ಕಾನೂನು ಮಾಡೋಣ.

ಶ್ರೀ ಕಡಿದಾಳ್ ಮಂಜಪ್ಪ.—ಪ್ರಾಮಾಣಿಕತೆ ಇರುವ ಬಡವರೂ ಬರಬೇಕು. We must welcome poor people, but not poor in honesty, poor in integrity, poor in culture. We must welcome rich people provided they do not enrich themselves by means of politics.

ಶ್ರೀ ಬಿ. ಎಸ್. ಬೋರಣ್ಣಗೌಡ (ಜೇಲೂರು).—ಬಡವರಲ್ಲಿ ಪ್ರಾಮಾಣಿಕತೆ ಇದೆ ಎಂಬುದಾಗಿ ತಾವು ಹೇಳುತ್ತೀರೋ ಅಥವಾ ಬಡವರು ರಾಜಕೀಯದಲ್ಲಿ ಬರಬಾರದು ಎಂದು ಹೇಳುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಬಡವರು ಬರಕೂಡದು ಎಂದು ನಾನು ಹೇಳಲಿಲ್ಲ. ಬಡವರು ಬರಬಹುದು. ಆದರೆ ಬಡವರಾಗಲಿ, ಐಶ್ವರ್ಯವಂತರಾಗಲೀ ಶ್ರೀಮಂತರಾಗಲಿ ಪ್ರಾಮಾಣಿಕತೆಯುಳ್ಳವರಾಗಿರಬೇಕು.

ಆಮೇಲೆ ಈ ಟ್ರಿಬ್ಯೂನಲ್ಸ್‌ನಲ್ಲಿ ಜುಡಿಷಿಯಲ್ ಆಫೀಸರ್ಸ್ ಇರಬೇಕೆಂದು ಹೇಳಿದ್ದಾರೆ. ಭಾರತದ ಯಾವ ರಾಜ್ಯದಲ್ಲೂ ಕೂಡ ಭೂ ಕಾಯಿದೆಗಳನ್ನು ಜಾರಿಗೆ ಕೊಡತಕ್ಕ ಅಧಿಕಾರವನ್ನು ಜುಡಿಷಿಯಲ್ ಆಫೀಸರುಗಳಿಗೆ ಕೊಟ್ಟಿಲ್ಲ ಎಂಬುದು ನನಗೆ ಗೊತ್ತಿಲ್ಲ. ಅವರು ನ್ಯಾಯವಾಗಿ ಕಾನೂನು ಪ್ರಕಾರವಾಗಿ ತೀರ್ಮಾನಮಾಡುತ್ತಾರೆ. ಕಾನೂನು ಒಂದು ಭಾಗ ಮಾನವೀಯತೆಯೇ ಒಂದು ಭಾಗ. ಈ ಕಾನೂನನ್ನು ಜಾರಿಗೆ ಕೊಡತಕ್ಕ ಮನುಷ್ಯ ವ್ಯವಹಾರ ಜ್ಞಾನವನ್ನು ತಿಳಿದುಕೊಂಡಿರಬೇಕು, ಮಾನವೀಯ ಸ್ವಭಾವವಿರಬೇಕು. ಮುಖ್ಯವಾಗಿ ಜುಡಿಷಿಯಲ್ ಆಫೀಸರ್ಸ್ ನಿಸ್ಪೃಹತೆಯುಳ್ಳವರು. ಆದರೆ ವ್ಯವಹಾರಿಕ ಜ್ಞಾನ ವಿರಬೇಕು. ಹಳ್ಳಿಗಳ ಸಂಪರ್ಕ ಇಟ್ಟುಕೊಳ್ಳದೆ, ವ್ಯವಸಾಯಗಾರರ ಸಂಪರ್ಕ ಇಟ್ಟುಕೊಳ್ಳದೆ ಹಳ್ಳಿಯನ್ನು ಉದ್ಧಾರಮಾಡುವ ವಿಷಯ ಮಾತನಾಡುತ್ತಾರೆ. ಅದರಿಂದೇನೂ ಪ್ರಯೋಜನವಿಲ್ಲ. ಇನ್ನು ವಕೀಲರು ಜನಗಳ ಪರವಾಗಿ ಟ್ರಿಬ್ಯೂನಲ್ಸ್ ಮುಂದೆ ಮತ್ತು ಇತರ ಅಧಿಕಾರಿಗಳ ಮುಂದೆ ಹಾಜರಾಗಲು ಅವಕಾಶ ವಿರಬೇಕೆಂದು ಬಹುಮಂದಿ ಹೇಳಿದ್ದಾರೆ. ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಕೋ-ಆಪರೇಟಿವ್ ಫಾರಂನಲ್ಲಿ ಬಲಾತ್ಕಾರಮಾಡುವುದು ಇರಬಾರದೆಂದು ಹೇಳಿದ್ದಾರೆ; ಅದಕ್ಕೂ ನಾನು ಅಡ್ಡಿ ಬರುವುದಿಲ್ಲ.

ಈ ಮಸೂದೆಯ 22ನೆಯ ಕಲಂಪ್ರಕಾರ ಭೂಮಾಲೀಕ ತನ್ನ ಭೂಮಿಯನ್ನು ಯಾರಿಗಾದರೂ ವಿಕ್ರಯ ಮಾಡುವುದಕ್ಕೆ ಪ್ರಯತ್ನ ಪಟ್ಟಾಗ ಅತನು ಗೇಣೀದಾರನಿಗೆ ಇಷ್ಟು ಮೊತ್ತಕ್ಕೆ ತೆಗೆದುಕೊಳ್ಳಬೇಕು ಎಂದು ನೋಟೀಸ್ ಕೊಡಬೇಕು, ಗೇಣೀದಾರ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ಆಗ ಬೇರೆಯವರಿಗೆ ಕೊಡುವುದಕ್ಕೆ ಅವಕಾಶವಿದೆ. ಇದರ ಕ್ರಯ ಮೊಬಲಗನ್ನು ನಿರ್ಧರಿಸುವುದಕ್ಕೆ ಮೈಸೂರು ಟೆನೆನ್ಸಿ ಆಕ್ಟಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ರೈತರಿಗೆ ತೊಂದರೆಯಾಗುತ್ತದೆಂಬುದು ಗೊತ್ತಿದೆ. ಅದಕ್ಕಾಗಿ 1952ರಲ್ಲಿ ಒಂದು ಆರ್ಡಿನೆನ್ಸ್ ಬಂತು. ಅದರ ಪ್ರಕಾರ ಸುಲಭವಾಗಿ ಗೇಣೀದಾರನನ್ನು ಬಿಡಿಸುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ರೈತರ ಅಜ್ಞಾನದಿಂದ, ಜಮೀರ್ದಾರರ ಬುದ್ಧಿ ಕುಶಲತೆಯಿಂದ, ಜಮೀನು ಬಿಡಿಸಿಕೊಂಡಿರಬಹುದು. ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ವಾಸುದೇವಣ್ಣಪ್ಪ.—ಸರ್ಕಾರದ ಕೈಯ್ಯಲ್ಲಿ ಇದು ಆಗುವುದಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಅಧಿಕಾರಿಗಳು ಮಾತ್ರ ಪ್ರಾಮಾಣಿಕರಾಗಿರಬೇಕು. ಜನರು ಪ್ರಾಮಾಣಿಕರಾಗಿರಬೇಕಾಗಿಲ್ಲ! ಎಂಬ

(ಶ್ರೀ ಕಡಿದಾಳ್ ಮಂಜಪ್ಪ)

ಅಭಿಪ್ರಾಯ ಬಂದಿದೆ. ಅದುಸರಿಯಲ್ಲ. ಅವರೂ ಸಹ ಪ್ರಾಮಾಣಿಕರಾಗಿರಬೇಕು. ಶ್ರೀ ಮುಕ್ಕಣ್ಣಪ್ಪನವರ ಸರ್ಕಾರ ಬಂದರೂ ಅವರು ಸ್ವರ್ಗದಿಂದ ಅಧಿಕಾರಿಗಳನ್ನು ಕರೆನುವುದಕ್ಕೆ ಆಗುವುದಿಲ್ಲ. ಹಿಂದೂಸ್ತಾನದ ಅಧಿಕಾರಿಗಳಿಂದಲೇ ಕೆಲಸ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಂ. ರಾಮಪ್ಪ.—ಬೊಂಬಾಯಿ ಲೆಜಿಸ್ಲೇಷ್ ಇದೆಯೆಲ್ಲಾ !

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಇದೆ. ಅದನ್ನು ಮಾಡುವುದಕ್ಕೆ ಸ್ವಲ್ಪ ಕಷ್ಟವಿದೆ. ಅದಕ್ಕೆ ಬೇರೆ ಒಂದು ಕಾನೂನನ್ನು ಮಾಡಬೇಕು.

ಆಮೇಲೆ ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಶ್ರೀಮಾನ್ ಕೆಂಚಪ್ಪನವರು ಗೋಮಾಳಗಳಿಗೆ ಸೀಲಿಂಗ್ ಪರಿಮಿತಿಯಿಂದ ವಿನಾಯಿತಿ ಮಾಡಬೇಕೆಂದು ಹೇಳಿದ್ದಾರೆ. ಅವನ್ನೇ ಇನ್ನೂ ಅನೇಕರ ಹೇಳಿದ್ದಾರೆ. ಎಫಿಷಿಯಂಟ್ಲಿ ಮ್ಯಾನೇಜ್ಡ್ ಫಾರಮ್ಸ್‌ಗೆ ವಿನಾಯಿತಿ ಕೊಡುವ ವಿಚಾರವಾಗಿ ಅನೇಕ ಜನರು ಪ್ರಸ್ತಾಪಿಸಿದ್ದಾರೆ. ಅವೆಲ್ಲಕ್ಕೂ ವಿವರವಾಗಿ ಜವಾಬನ್ನು ಕೊಡುವುದಕ್ಕೆ ಸಾಕಾದಷ್ಟು ಸಮಯವಿಲ್ಲದೇ ಇರುವುದರಿಂದ ನಾನು ವಿಷಾದಿಸುತ್ತೇನೆ.

ಕೊನೆಯದಾಗಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಇದನ್ನು ಪರಿಶೀಲನೆಮಾಡುತ್ತಾರೆ. ಸೆಲೆಕ್ಟ್ ಕಮಿಟಿಯಿಂದ ಬಂದನಂತರ ಈ ಸಭೆಯಲ್ಲಿ ಸೆಲೆಕ್ಟ್ ಕಮಿಟಿಯ ವರದಿಯಮೇಲೆ ತಮ್ಮೆಲ್ಲರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ವಿದೆ. ಈಗ ಹತ್ತು ದಿನಗಳಕಾಲ ಕುಳಿತುಕೊಂಡಿದ್ದೀರಿ. ಆಗ ಎಷ್ಟು ಕಾಲ ಆಗುತ್ತದೋ ಹೇಳುವುದಕ್ಕಾಗುವುದಿಲ್ಲ. ನನ್ನ ಹಣೆಯಿಬರಹ ವಿವಾದಾಸ್ಪದವಾದ ಮಸೂದೆಗಳನ್ನು ಸಮರ್ಥಿಸುವುದು ನನ್ನ ಪಾಲಿಗೇ ಬಿದ್ದಿದೆ. ತಮ್ಮ ಸಹಕಾರದಿಂದ, ತಮ್ಮ ಸಹಾನುಭೂತಿಯಿಂದ ಈ ಮಸೂದೆ ಒಂದು ಒಳ್ಳೆಯ ಸ್ವರೂಪ ತಾಳಲಿ ಎಂದು ಹಾರೈಸುತ್ತೇನೆ. ಸಹೋದರಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಅವರ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದರು. ಅವರ ಯಜಮಾನರು ನನಗೆ ತುಂಬ ಸ್ನೇಹಿತರು. ಬಡವರ ವಿಚಾರದಲ್ಲಿ ಮೃದುಭಾವನೆಯಿತ್ತು. ಆದರೆ ಇವರೇಕೋ ಬಡವರ ವಿಚಾರದಲ್ಲಿ ಅಷ್ಟು ಮೃದು ಸ್ವಭಾವವನ್ನು ಇಟ್ಟುಕೊಂಡಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ತಾವು ಒಂದುವೇಳೆ ಗುಂಡ್ಲುಪೇಟೆಗೆ ಬರುವಾಗ ಅಲ್ಲಿ ಒಂದುಸಾರಿ ಬಂದು ನೋಡಿ.

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಚೆನ್ನಾಗಿ ಇರಬೇಕು. ರೈತರಲ್ಲಿ ಒಡ ರೈತರೂ ಸೇರಿದ್ದಾರೆ ಎಂದು ನಾವು ತಿಳಿಯಬೇಕು. ಈಗ ಸುಮಾರು ಒಂದು-ಒಂದೂಕಾಲು ಗಂಟೆಯಿಂದ ತಾಳ್ಮೆಯಿಂದ ಸರ್ಕಾರದ ಅಭಿಪ್ರಾಯವನ್ನು ನನ್ನ ಪಾಲಕ ಕೇಳಿದ್ದಕ್ಕಾಗಿ ತಮ್ಮೆಲ್ಲರನ್ನೂ ವಂದಿಸುತ್ತೇನೆ ಮತ್ತು ಅಧ್ಯಕ್ಷರನ್ನೂ ವಂದಿಸುತ್ತೇನೆ.

1-15 P.M.

Mr. SPEAKER.—The question is :

"That the Mysore Land Reforms Bill, 1958, be taken into consideration."

The motion was adopted.

Motion to refer to a Joint Select Committee.

Sri Kadidal MANJAPPA.—Sir, I move :

"That under rule 322 of the Rules of Procedure and Conduct of Business in the Mysore Legislative Assembly Rule 243 in relation to motion for reference to a Joint Select Committee be suspended."

Mr. SPEAKER.—The question is :

"That under rule 322 of the Rules of Procedure and Conduct of Business in the Mysore Legislative Assembly, Rule 243 in relation to motion for reference to a Joint Select Committee be suspended."

The motion was adopted.

Sri KADIDAL MANJAPPA.—Sir, I move :

"That the Mysore Land Reforms Bill, 1958, be referred to a Joint Select Committee of this House and the Legislative Council consisting of a total number of 44 Members (33 from this House and 11 from the Legislative Council), that the concurrence of the Legislative Council be obtained therefore, and that the following members of this House shall be members of the Joint Select Committee, namely :—

Sriyuths—

1 Dr. R. Nagan Gowda
2 H. M. Channabasappa
3 K. Hanumanthaiya
4 A. R. Panchagavi
5 M. P. Patil
6 R. M. Desai
7 J. L. Kabadi
8 Maqsood Ali Khan
9 K. M. Devaiya
10 G. Sivappa
11 M. R. Patil
12 Mallappa Kollur
13 Veerendra Patil
14 B. N. Boranna Gowda
15 A. Muniyappa
16 B. Rachiah
17 K. Puttaswamy
18 H. K. Veeranna Gowdh
19 Ramakrishna Hegde